

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 06 | Issue : 301 | Saturday 10-08-2024 | E-mail : maruti.b.hosamani76@gmail.com | Page: 4 | Price : Rs. 1/-


## ಪಿ.ಎಸ್.ಐ ಪರಶುರಾಮ್ ನಿಗೂಢ ಸಾವಿನ ತನಿಖೆ ಸಿಬಿಐಗೆ ವಹಿಸಿ, ನೊಂದ ಕುಟುಂಬಕ್ಕೆ 2 ಕೋಟಿ ಪರಿಹಾರ–ಹುದ್ದೆ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ

**ಮಸ್ಕಿ :** ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿ ಯಾದಗಿರಿ ಠಾಣೆಯಲ್ಲಿ ಪಿ.ಎಸ್.ಐ ಪರಶುರಾಮ್ ಅವರ ಸಾವಿನ ಕುರಿತು ತನಿಖೆಗೆ ಸಿ.ಬಿ.ಐಗೆ ವಹಿಸುವುದು, ನೊಂದಿರುವ ಕುಟುಂಬಕ್ಕೆ 2? ಕೋಟಿ ಮೊತ್ತದ ಪರಿಹಾರ ಮಂಜೂರಿ ಮಾಡುವುದು, ಮತ್ತು ನೊಂದಿರುವ ಕುಟುಂಬದವರಿಗೆ ಸರಕಾರ ಉದ್ಯೋಗ ನೀಡಲು ಒತ್ತಾಯಿಸಿ ಆಗ್ರಹದ ಮನವಿ ಪತ್ರವನ್ನು ದಲಿತ ಪ್ರಗತಿಪರ ಸಂಘಟನೆಯು ತಹಶೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಹತ್ತು ಹಲವು ಕನಸುಗಳನ್ನು ಕಟ್ಟಿ ಕೊಂಡು ಬಾಳ ಬೇಕಾದ ಒಬ್ಬ ದಕ್ಷ ಮತ್ತು ಪ್ರಮಾಣಿಕ ಅಧಿಕಾರಿ ಸಾವು ಕಂಡಿರುವದು ವಿಪರ್ಯಾಸ ಸಂಗತಿಯಾಗಿದೆ. ಇದು ಒಬ್ಬ ಪಿ.ಎಸ್.ಐ ಅವರ ಸಂಗತಿಯಲ್ಲ, ಬಹುತೇಕವಾಗಿ ಇಂತಹ ಉದ್ಯೋಗ ಮಾಡುವ ದಕ್ಷ ಅಧಿಕಾರಿಗಳಿಗೆ ಕಿರುಕುಳ ತಪ್ಪಿದ್ದಲ್ಲ. ಶಾಸಕ ಮತ್ತು ಅವರ ಮಗನ ಪಿತೂರಿ, ಹಣದ ದಾಹದಿಂದ ಒಬ್ಬ ಯುವ ಅಧಿಕಾರಿ ಸಾವನ್ನಪ್ಪಿರುವುದು ಯುವ ಪೀಳಿಗೆ ತಲೆ ತಗ್ಗಿಸುವಂತಾಗಿದೆ. ಅಲ್ಲದೆ ಇದನ್ನು ಖಂಡಿಸುವದು ಅನಿವಾರ್ಯವಾಗುತ್ತದೆ. ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟ ಮಸ್ಕಿ ತಾಲೂಕ ವತಿಯಿಂದ ತಮ್ಮಲ್ಲಿ ವಿನಂತಿ ಪೂರ್ವಕವಾಗಿ ಮತ್ತು ಅಗತ್ಯದ ಕ್ರಮಕ್ಕಾಗಿ ಪಕ್ಷ ಯಾವುದೇ ಇರಲಿ, ಶಾಸಕರು ಯಾವುದೇ ಪಕ್ಷದವರು ಇರಲಿ, ನ್ಯಾಯ ಎಲ್ಲರಿಗೂ ಒಂದೇ ಆಗಿರಬೇಕು. ತಮ್ಮ ಪಕ್ಷದವರು ಎಂದು ಅವರನ್ನು ಕರೆಯಿಸಿ ಮಣೆ ಹಾಕುವ ಕೆಲಸವನ್ನು ಸರಕಾರ ಮಾಡಬಾರದು ಎಂಬುದು ಸತ್ಯವಾದ ಮಾತಾಗಿದೆ. ಯಾಕೆಂದರೆ ಪರಶುರಾಮ ಪಿ.ಎಸ್.ಐ. ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿದ ಇವರು ದಕ್ಷ ಮತ್ತು ಪ್ರಮಾಣಿಕ ಅಧಿಕಾರಿಯಾಗಿದ್ದು, ಇದನ್ನು ಸಹಿಸದ ಯಾದಗಿರಿ ಶಾಸಕ ಚನ್ನಾರೆಡ್ಡಿ ಮತ್ತು ಅವರ ಮಗನಾದ ಪಂಪನಗೌಡ ಇವರು ಸೇರಿ ಇನ್ನಿಲ್ಲದ ತೊಂದರೆ, ಹಣಕ್ಕಾಗಿ ಒತ್ತಾಯಿಸುವದು, ಮತ್ತು ವರ್ಗಾವಣೆ ಎಂಬ ಬೆದರಿಕೆ ಹಾಕುವುದು ಹಾಗೂ ಇನ್ನೂ ಅನೇಕ ತರಹದ ತೊಂದರೆ ಕೊಟ್ಟಿರುವುದು ಈಗಾಗಲೇ ಮಾಧ್ಯಮಗಳಿಂದ ಬಯಲಾಗಿದೆ. ಆದರೆ ತಮ್ಮ ಸರಕಾರ ಈ ಸಾವನ್ನು ಕೇವಲ ಸಿ.ಐ.ಡಿ ಗೆ ವಹಿಸಿ ಕೈ ತೊಳೆದು ಕೊಂಡಿರುವುದು ಸರಿಯಾದ ಕ್ರಮವಾಗುವದಿಲ್ಲ, ಸತ್ಯಾ ಸತ್ಯತೆಯನ್ನು ಬಯಲು ಮಾಡಲು ಸಿ.ಬಿ.ಐ ಗೆ ವಹಿಸುವದು ಸೂಕ್ತವಾಗುತ್ತದೆ. ಕಾರಣದಯವಿಟ್ಟು ಅಹಿತಕರ ಘಟನೆಗಳಿಗೆ ಅವಕಾಶ ನೀಡದೇ ಕೂಡಲೇ ಕ್ರಮ ಜರುಗಿಸಲು ನಮ್ಮ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟ ತಾಲೂಕ ಘಟಕದ ಒತ್ತಾಸೆಯಾಗಿದೆ. ಒಟ್ಟಿನಲ್ಲಿ ಯಾದಗಿರಿ ಠಾಣೆಯಲ್ಲಿ ಪಿ.ಎಸ್.ಐ ಪರಶುರಾಮ್ ಅವರ ಸಾವಿನ ಕುರಿತು ತನಿಖೆಗೆ ಸಿ.ಬಿ.ಐಗೆ ವಹಿಸುವದು, ನೊಂದಿರುವ ಕುಟುಂಬಕ್ಕೆ 2? ಕೋಟಿ ಮೊತ್ತದ ಪರಿಹಾರ ಮಂಜೂರಿ ಮಾಡುವುದು, ಮತ್ತು ನೊಂದಿರುವ ಕುಟುಂಬದವರಿಗೆ ಸರಕಾರ ಉದ್ಯೋಗ ನೀಡುವಂತೆ ದಲಿತಪರ ಕಾಳಜಿಯ ನಿಲುವನ್ನು ಹೊಂದಿರುವ ಎಲ್ಲಾ ದಲಿತ ಪ್ರಗತಿಪರ ಸಂಘಟನೆ ಒಕ್ಕೂಟ ಆಕ್ರೋಶದ ಮನವಿ ಪತ್ರವನ್ನು ಮಸ್ಕಿ ತಹಶೀಲ್ದಾರರಾದ ಡಾ. ಮಲ್ಲಪ್ಪ. ಕೆ. ಯರಗೋಳ ಇವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ದಲಿತ ಮುಖಂಡರಾದ ದೊಡ್ಡಪ್ಪ ಮುರಾರಿ, ಸಿ ದಾನಪ್ಪ ಮಸ್ಕಿ ದಲಿತ ಸಾಹಿತಿ, ಮಲ್ಲಪ್ಪ ಎಸ್. ಗೋನಾಳ, ಗಂಗಾಧರ್ ಬುದ್ದಿನ್ನಿ, ಮೌನೇಶ್ ಮುರಾರಿ, ಅಶೋಕ ನಂಜಲದಿನ್ನಿ, ಶ್ರೀಕಾಂತ್ ಮುರಾರಿ, ಹನುಮಂತಪ್ಪ ವೆಂಕಟಾಪುರ, ಮಲ್ಲಯ್ಯ ಬಳ್ಳಾ, ಪ್ರಶಾಂತ್ ಮುರಾರಿ, ಕಾಸಿಮಪ್ಪ ಡಿ ಮುರಾರಿ, ಕಿರಣ್ ಮುರಾರಿ, ಹುಲುಗಪ್ಪ ಹಸಮಕಲ್, ಚೆನ್ನಪ್ಪ ಹೆಡಿಗಿಬಾಳ ಕ್ಯಾಂಪ್, ಬಾಲರಾಜ್ ವಿರುಪಾಪುರ, ಅಶೋಕ್ ಮುರಾರಿ, ಮೌನೇಶ್ ಅಮೀನಗಡ, ಬಸವರಾಜ್ ಡಿ ಉದ್ಬಾಳ, ದುರುಗರಾಜ ವಟಗಲ್, ಶಿವರೆಡ್ಡಿ ಮಸ್ಕಿ, ಸಿದ್ದು ಮುರಾರಿ, ಹುಚ್ಚರೆಡ್ಡಿ ಹಿರೇ ದಿನ್ನಿ, ಬಸವರಾಜ್ ಗೌಡನಭಾವಿ, ಮರಿಸ್ವಾಮಿ ಬೆನಕನಾಳ, ಜಮದಗ್ನಿ ಗೋನಾಳ, ದಲಿತಪರ ನಿಲುವುಳ್ಳ ಹೋರಾಟಗಾರರು, ಸಾರ್ವಜನಿಕರು, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ.**

## ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಯಲ್ಲಿ "ಆರೋಗ್ಯ ಅರಿವು" ಜಾಗೃತಿ

**ಶಿರೂರು:** ಬಾಗಲಕೋಟೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ, ಬೆನಕಟ್ಟಿ ಉಪ ಕೇಂದ್ರ ವ್ಯಾಪ್ತಿಯ, ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಯಲ್ಲಿ, "ಆರೋಗ್ಯ ಅರಿವು ಜಾಗೃತಿ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ, ಎಸ್ ಅಂಗಡಿಯವರು, ಮಳೆಗಾಲದಲ್ಲಿ ಸಾಂಕ್ರಾಮಿಕವಾಗಿ ರೋಗಗಳ ತಡೆಗೆ ಮುಂಜಾಗ್ರತೆ ಕ್ರಮಗಳ ಪಾಲನೆ ಮಾಡಬೇಕು.

ಸೊಳ್ಳೆ ಉತ್ಪತ್ತಿ ತಾಣಗಳು ಬೆಳೆಯದಂತೆ ನೋಡಿ ಕೊಳ್ಳಬೇಕು "ಈಡೀಜ್ ಇಜಿಪ್ತೆ" ಉತ್ಪತ್ತಿ ತಾಣಗಳು ನಿರ್ಮೂಲನೆ ಮಾಡಬೇಕು. ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು. ಸುತ್ತ ಮುತ್ತ ಪರಿಸರ ಸ್ವಚ್ಛತೆ ಕಾಪಾಡಿ ಕೊಳ್ಳಬೇಕು. ಸೊಳ್ಳೆಗಳ ಕಡಿತದಿಂದ ಮಲೇರಿಯಾ , ಡೆಂಗ್ಯೂ, ಚಿಕೂನ್ ಗುನ್ಯಾ, ಆನೆಕಾಲು ರೋಗ ಮೆದುಳು ಜ್ವರ, ಸಾಂಕ್ರಾಮಿಕವಾಗಿ ಒಬ್ಬರಿಂದ ಒಬ್ಬರಿಗೆ ಹರಡುತ್ತವೆ, ಸಾಂಕ್ರಾಮಿಕ ರೋಗಗಳ ತಡೆಗೆ, ಸೊಳ್ಳೆ ಉತ್ಪತ್ತಿ ತಾಣಗಳು ಬೆಳೆಯದಂತೆ ನೋಡಿ ಕೊಳ್ಳಬೇಕು. ಸೊಳ್ಳೆ ಪರದೆ ನಿರೋಧಕ ಬಳಸಬೇಕು, ವಾಂತಿ ಬೇಧಿ ತಡೆಗೆ ಶುದ್ಧ ನೀರು ಸೇವನೆ ಮಾಡಬೇಕು, ಕೈಗಳ ಶುಚಿತ್ವ ಕಾಪಾಡಿ ಕೊಳ್ಳಬೇಕು.



ಯಾವುದೇ ತರಹ ಜ್ವರ ಕಾಣಿಸಿದರೆ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಚಿಕಿತ್ಸೆ ಉಚಿತ ವಾಗಿರುತ್ತದೆ. ವೈಯಕ್ತಿ ಸ್ವಚ್ಛತೆ, ಶುದ್ಧ ನೀರು ಸೇವನೆ ಮಾಡಬೇಕು.

ವಸತಿ ಶಾಲಾ ಆವರಣದಲ್ಲಿ "ಈಡೀಜ್ ಇಜಿಪ್ತೆ" ಲಾರ್ವಾ ಉತ್ಪತ್ತಿ ತಾಣಗಳ ಸಮೀಕ್ಷೆ ಮಾಡಿ ಲಾರ್ವಾ ತಾಣಗಳ ಖಾಲಿ ಮಾಡಿಸಲಾಯಿತು. ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲಾ ಆರೋಗ್ಯ ಅರಿವು ಜಾಗೃತಿ ಕಾರ್ಯಕ್ರಮದಲ್ಲಿ ಶಾಲಾ ಶೂಷಶ್ರಣಾಧಿಕಾರಿ ಸಿರಿನ್ ದರ್ವೆಶಿ, ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪಿ.ಎಸ್.ಐ ಸುರೇಶ್ ಮಂಟೂರ ಕಲಕೇರಿ ಮತ್ತು ಅಂಬಳನೂರ ಗ್ರಾಮಸ್ಥರ ವತಿಯಿಂದ ಗೌರವ ಸನ್ಮಾನ



**ಕಲಕೇರಿ :** ಪಿ.ಎಸ್.ಐ ಸುರೇಶ್ ಮಂಟೂರ ಸಾಹೇಬರಿಗ ಕಲಕೇರಿ ಗ್ರಾಮದ ಮತ್ತು ಅಂಬಳನೂರ ಗ್ರಾಮಸ್ಥರ ವತಿಯಿಂದ ಗೌರವ ಸನ್ಮಾನ ಮಾಡಿದರು. ಸಿದ್ದು ಪೂಜಾರಿ ಕಾಂಗ್ರೆಸ್ ಮುಖಂಡರು ಕಲಕೇರಿ ಮುಕ್ಕಣ್ಣ ಗುಮ್ಮ ಶೆಟ್ಟಿ ಜೆಡಿಎಸ್ ಮುಖಂಡರು ಕಲಕೇರಿ. ಅಂಬಳನೂರ ಗ್ರಾಮಸ್ಥರು ಗೂಳಪು ಚೌದ್ರಿ ಮಾಜಿ ಗ್ರಾಮ್ ಪಂಚಾಯ್ತಿ ಸದಸ್ಯರು. ಆಪ್ಪಣ್ಣಗರಸಾಗಿ ಎಸ್ ಡಿ ಎಂ ಸಿ ಅಧ್ಯಕ್ಷರು. ದಸ್ತಗೀರಸಾಬ ನಾಯ್ಕೋಡಿ ಜೆ.ಡಿ.ಎಸ್ ಮುಖಂಡರು. ಚೆನ್ನಪ್ಪ ಗರಸಾಗಿ. ಪರಮಾನಂದ ಚಬನೂರ್. ಎಲ್ಲಾ ಗ್ರಾಮಸ್ಥರ ವತಿಯಿಂದ ಕಲಕೇರಿ ಪಿ.ಎಸ್.ಐ ಸುರೇಶ್ ಮಂಟೂರ ಸಾಹೇಬರಿಗ ಗೌರವ ಸನ್ಮಾನ ಮಾಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ . ಮನಗೂಳಿ**

## ವಾಸ್ತವದ ಐದು ಹಾಯ್ಕುಗಳು

1) ಜಗದ ತುಂಬ
ದ್ವೇಷ ದಳ್ಳುರಿ ಹೆಚ್ಚಿ
ನೆಮ್ಮದಿ ದೂರ

2) ಅಧಿಕಾರವೇ
ಮುಖ್ಯವಾದರೆ, ಜನ
ಕಾಳಜಿ ಶೂನ್ಯ

3) ಗಾಂಧೀಜಿ ಕಂಡ
'ರಾಮರಾಜ್ಯ' ಇವತ್ತು
ಬರಿ ಭಾಷಣ

4) ನಾಯಕರಲ್ಲಿ
ಹೆಚ್ಚಿದ ಶೋಕಿತನ
ಹೇಳುವರ್ಯಾರು!

5) ತುಂಡು ಪಂಚೆಯ
ಫಕೀರ ಜಗಕ್ಕೆಲ್ಲ
ಮಾದರಿಯಾದ



– ಎಸ್. ಕೆ. ಕೊನೆಸಾಗರ

## ಚಿತ್ರಕಲೆಯಲ್ಲಿ ಅದ್ಭುತ ಪ್ರತಿಭೆಯುಳ್ಳ ಯುವಕ ತನ್ವೀರ್

**ಕೊಟ್ಟೂರು :** ವಿಜಯನಗರ ಜಿಲ್ಲೆ ಕೊಟ್ಟೂರು ಪಟ್ಟಣದ ಬಳ್ಳಾರಿ ಕ್ಯಾಂಪ್ ನಲ್ಲಿರುವ ಶ್ರೀ ಗುರುದೇವ ಪ್ರೌಢ ಶಾಲೆಯಲ್ಲಿ ಹತ್ತನೇ ತರಗತಿ ಓದುತ್ತಿರುವ ತನ್ವೀರ್ ಎಂಬ ಯುವಕ ಚಿತ್ರಕಲೆ ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಅವಾರ್ಡ್ ಗಳನ್ನ ಪಡೆದಿರುತ್ತಾನೆ ತುಂಬಾ ಬಡತನದಲ್ಲಿ ಬೆಳೆದು ಬಂದ ಯುವಕನಿಗೆ ನೆರವಿನ ಮಹಾಪೂರ ತುಂಬಾ ಅವಶ್ಯಕತೆ ಇದೆ ಯುವಕನ ತಂದೆ ರೆಹಮಾನ್,

ತಾಯಿ ಮಮ್ತಾಜ್ ಬೇಗಂ ಕೂಲಿಮಾಡಿ ಜೀವನ ನಡೆಸುತ್ತಿದ್ದಾರೆ ಇವನ ಚಿತ್ರಕಲೆಗೆ ಪೂರಕವಾಗಿ ಉನ್ನತ ಮಟ್ಟಕ್ಕೆ ಪ್ರತಿರೂಪ ಗೊಳಿಸಲು ಸಾಧ್ಯವಾಗದ ಮಟ್ಟದಲ್ಲಿ ಬಡತನ ತುಂಬಿದೆ ಹತ್ತನೇ ತರಗತಿ ಓದುತ್ತಿರುವ ತನ್ವೀರ್ ಮನೆಯಲ್ಲಿ ಚಿತ್ರಕಲೆ,

ಡ್ರಾಯಿಂಗ್ ಮಾಡುವ ಅವ್ಯಾಸ ಬೆಳಸಿಕೊಂಡಿದ್ದಾನೆ ನಿಜಕ್ಕೂ ಅದ್ಬುತ ಚಿತ್ರಗಳನ್ನ ಬಿಡಿಸುವಲ್ಲಿ ಪ್ರವೀಣನ್ನಾಗಿದ್ದಾನೆ ಈತನ ಕಲೆಗೆ 2022 ರಲ್ಲಿ ಚಿತ್ರಕಲೆ ಹಾಗೂ 2023 ರಲ್ಲಿ ಪ್ರತಿಭಾ ಕಾರಂಜಿ ಮತ್ತು ಹಸಿರು ವನಲು ಸೇವಾ ಸಂಸ್ಥೆಯಿಂದ ಉತ್ತಮ ಚಿತ್ರಕಲೆ ಪ್ರಶಸ್ತಿ ಹಾಗೂ 2024 ರಲ್ಲಿ ಚಿನ್ನಾರ ಚಿತ್ರ ಅವಾರ್ಡ್ ರಾಷ್ಟ್ರಮಟ್ಟದಲ್ಲಿ ಪಡೆದುಕೊಂಡಿರುತ್ತಾನೆ

ಇಂತಹ ಯುವಕನ ಸಾಧನೆ ಅಪರೂಪ



ಕೊಟ್ಟೂರು ತಾಲೂಕಿಗೆ ತಾನು



ಓದುತ್ತಿರುವ ಶಾಲೆಗೆ ಅವನ ತಂದೆ ತಾಯಿ ಕುಟುಂಬದವರಿಗೆ

ಗೌರವ ತಂದಿರುತ್ತಾನೆ ಇಂತಹ ಪ್ರತಿಭೆಗಳು ಅಪರೂಪಗಳಲ್ಲೇ ಅಪರೂಪ ಎಂದು ಹೇಳಿದರು ತಪ್ಪಿಲ್ಲ ಸರ್ಕಾರ ತಾಲೂಕು ಆಡಳಿತ ಕ್ಷೇತ್ರದ ಶಾಸಕರ ನೆರವಿನ ಹಸ್ತ ನೀಡಬೇಕಾಗಿದೆ

## ಬ್ರಿಲಿಯಂಟ್ ಶಾಲೆ ಮಕ್ಕಳು ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ



**ತಾಳಿಕೋಟಿ :** ತಾಲೂಕಿನ ಬಿಳೇಭಾವಿಯ ಭಾಗ್ಯವಂತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 2024–25ನೇ ಸಾಲಿನ ಬ.ಸಾಲವಾಡಗಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಬ್ರಿಲಿಯಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಮಕ್ಕಳು ಬಾಲಕರ ವಿಭಾಗದ ಗುಂಪು ಆಟಗಳಲ್ಲಿ ಖೋ ಖೋ, ಕಬಡ್ಡಿ, ವಾಲಿಬಾಲ್ ಹಾಗೂ ಥ್ರೋ ಬಾಲ್ ಗಳಲ್ಲಿ ಪ್ರಥಮ ಸ್ಥಾನ ಪಡೆದು ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕಿಯರ ಗುಂಪು ಆಟಗಳಲ್ಲಿ ಕಬಡ್ಡಿ ಪ್ರಥಮ ಸ್ಥಾನ, ಖೋ ಖೋ ದ್ವಿತೀಯ ಸ್ಥಾನ ಪಡೆದು–ಕೊಂಡಿದ್ದಾರೆ. ವೈಯಕ್ತಿಕ ಆಟಗಳಲ್ಲಿಯೂ ಬ್ರಿಲಿಯಂಟ್ ಶಾಲೆಯ ಮಕ್ಕಳು ಭಾಗವಹಿಸಿ ಪ್ರಥಮ, ದ್ವಿತೀಯ ಸ್ಥಾನಗಳನ್ನು ಪಡೆದು–ಕೊಂಡು ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ*

ಕ್ರೀಡಾ ಪಟುಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್ ಬಿ ನಡುವಿನಮನಿ ಕಾರ್ಯದರ್ಶಿ ಎಮ್. ಬಿ. ಮಡಿವಾಳರ ಹಾಗೂ ಆಡಳಿತ ಮಂಡಳಿ, ಬ್ರಿಲಿಯಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಮೈಲೇಶ್ವರದ ಮುಖ್ಯ ಗುರುಗಳು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದರು.

## ಶಾಸಕ ಗವಿಯಪ್ಪ ನವರಿಂದ 191,38 ಲಕ್ಷಗಳ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ

**ಹೊಸಪೇಟೆ :** ನಗರದ ಎ.ಪಿ.ಎಂ.ಸಿ ಮುಖ್ಯ ಮಾರುಕಟ್ಟೆಯ ಪ್ರಾಂಗಣದಲ್ಲಿ ಜರುಗಿದ 2023–24ನೇ ಸಾಲಿನ ಖಖಆಈ–29ರ ಯೋಜನೆ ಅಡಿಯಲ್ಲಿ 191.38 ಲಕ್ಷ ರೂ. ಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಇಂದು ಭೂಮಿ ಪೂಜಿ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದ ನಂತರ ಶಾಸಕ ಹೆಚ್ ಆರ್ ಗವಿಯಪ್ಪ ನವರು ಮಾತನಾಡಿ ನಿರ್ಮಿತಿ ಕೇಂದ್ರದಿಂದ ಇಲ್ಲಿ ಈಗಾಗಲೇ 4 ಕೋಟಿ ರೂಪಾಯಿಗಳ ರಸ್ತೆ ಕಾಮಗಾರಿ ಪ್ರಾರಂಭವಾಗಿದೆ.

ಮುಂದಿನ ದಿನಗಳಲ್ಲಿ ಕೋಲ್ಡ್ ಸ್ಟೋ–ರೇಜ್ ಗಾಗಿ ಕ್ರಿಯೆ ಯೋಜನೆ ನಡೆದಿದೆ ಆದಷ್ಟು ಬೇಗ ಪ್ರೊಪೋಸಲ್ ಕಳುಹಿಸಿ ಕೊಡಲಾಗುವುದು.

ಮುಂದಿನ ವರ್ಷದಲ್ಲಿ ಎಲ್ಲಾ ಕಾಮಗಾರಿಗಳು ಸಂಪೂರ್ಣ ಮುಕ್ತಾಯಗೊಳಿಸಲಾಗುವುದು.



ಎ.ಪಿ.ಎಂ.ಸಿ ತರಕಾರಿ ಮಾರ್ಕೆಟ್ ಎಂಬಂತಾಗಿದೆ, ಹಾಗಾಗಿ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ರಸ್ತೆ ಮೇಲೆ ಮಾರುತ್ತಿರುವ ತರಕಾರಿ ವ್ಯಾಪಾರಿಗಳಿಗೆ ಒಳಗಡೆ ಮಾರಲು, ಸುವಸ್ಥಿತವಾಗಿ ಒಂದು ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ಇನ್ನೂ 2–3 ರಸ್ತೆಗಳು ಮಾಡುವುದು ಬಾಕಿ ಇದೆ ಒಟ್ಟಿನಲ್ಲಿ ಎರಡು ಮೂರು ವರ್ಷಗಳಲ್ಲಿ ಎ.ಪಿ.ಎಂ.ಸಿ ಯನ್ನು ಸ್ವಚ್ಛವಾಗಿ ಕಾಣುವಂತೆ ಹಾಗೂ ಉತ್ತಮ ರೀತಿಯಲ್ಲಿ ವ್ಯಾಪಾರ ಆಗುವಂತೆ ಮಾಡಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಅವೆಲ್ಲವೂ ಮಾಡಲಾಗುವುದು ಎಂದರು.

ಎ.ಪಿ.ಎಂ.ಸಿ ಕಾರ್ಯದರ್ಶಿ ಸಿದ್ದರಾಮಯ್ಯ ಸ್ವಾಮಿಗೆ ಇಲ್ಲಿ ಸಂಗ್ರಹವಾಗುತ್ತಿರುವ ಆದಾಯದ ಮತ್ತು ಅಭಿವೃದ್ಧಿಯ ಬಗ್ಗೆ ಪ್ರತಿ ವಾರಕ್ಕೊಮ್ಮೆ ಬಂದು ವರದಿ ನೀಡಬೇಕು ಎಂದು ಖಡಕ್ಕಾಗಿ ಸೂಚನೆ ಕೊಟ್ಟರು.

ಈ ಸಂಧರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷರು ನಿಂಗಪ್ಪ ಗುಜ್ಜಲ್, ಬಸವಜ್ ದೇವರಮನಿ, ಕಣ್ಣೇಶ್ ಕಮಲಾಪುರ ನಾಮ ನಿರ್ದೇಶತ ಸದಸ್ಯರು, ಎ.ಪಿ.ಎಂ.ಸಿ ಕಾರ್ಯದರ್ಶಿ ಸಿದ್ದರಾಮಯ್ಯ ಸ್ವಾಮಿ, ಕೃಷಿ ಮಾರುಕಟ್ಟೆಯ ಎಇಇ ಸುದರ್ಶನ್, ಸೋಮಶೇಖರ್ ಬಣ್ಣದಮನೆ , ತೋಟಪ್ಪ, ವರ್ತಕರು ಇದ್ದರು.

# ‘ಪ್ರಾತಃ ಸ್ಮರಣೀಯರು’ ಅಪರೂಪದ ಕೃತಿ: ತೋಂಟದ ಸಿದ್ಧರಾಮ ಶ್ರೀಗಳು



**ವಿಜಯಪುರ :** ಡಾ. ಫ.ಗು. ಹಳಕಟ್ಟಿ, ಬಂಥನಾಳ ಶ್ರೀಗಳು, ಬಿ.ಎಂ.ಪಾಟೀಲ ಮತ್ತು ಬಂಗಾರಮ್ಮ ಸಜ್ಜನರು ಶಿಕ್ಷಣ, ಸಾಹಿತ್ಯ, ಸಾಮಾಜಿಕ ಕ್ಷೇತ್ರದ ರೂವಾರಿಗಳು.ಈಮಹನೀಯರು ಉತ್ತರ ಕರ್ನಾಟಕದ ಪ್ರತಿಷ್ಠಿತ ಬಿ.ಎಲ್.ಡಿ.ಇ. ಸಂಸ್ಥೆಯ ಆಧಾರ ಸ್ತಂಭಗಳು ಎಂದು ಪ.ಪೂ. ತೋಂಟದ ಸಿದ್ಧರಾಮ ಶಿವಯೋಗಿಗಳು ಹೇಳಿದರು.

ವಿಶ್ರಾಂತ ಪ್ರಾಚಾರ್ಯ ಡಾ. ವಿ.ಡಿ. ಐಹೊಳ್ಳಿ ಅವರು ಬರೆದ ಬಿ.ಎಲ್.ಡಿ.ಇ. ಸಂಸ್ಥೆಯ ಪ್ರಾತಃಸ್ಮರಣೀಯರು ಕೃತಿಯ ನ್ನು ಬಿಡುಗಡೆಮಾಡಿಮಾತನಾಡಿದರು. ನೋವನ್ನುಂಡು ಶಿಕ್ಷಣದ ಜ್ಯೋತಿ ಬೆಳಗಿಸಿದವರು ಹಳಕಟ್ಟಿಯವರು. ಶೈಕ್ಷಣಿಕ ಕ್ರಾಂತಿಯ ಮೂಲಕ ಸಂಸ್ಥೆಯನ್ನು ಮುನ್ನಡೆಸಿದರು ಬಂಥನಾಳ ಶ್ರೀಗಳು. ಶಿಕ್ಷಣದ ಜೊತೆ ಸಾಹಿತ್ಯ, ಸಾಂಸ್ಕೃತಿಕವಾಗಿ ಸಂಸ್ಥೆಯನ್ನು ಬೆಳೆಸಿದವರು ಬಿ.ಎಂ.ಪಾಟೀಲರು. ಸ್ವಂತ ಜಮೀನನ್ನೇ ದಾನ ಮಾಡಿ ಸಾವಿರಾರು ವಿದ್ಯಾರ್ಥಿಗಳು ವಿದ್ಯೆ ಸಿಗುವಂತೆ ಮಾಡಿದ ಮಹಾದಾನಿ ಬಂಗಾರಮ್ಮ ಸಜ್ಜನ. ಇಂಥವರ ಕುರಿತು ಕೃತಿಯೊಂದು ಹೊರಬಂದಿರುವುದು ಸಂತಸದ ಸಂಗತಿ.

ಇದೊಂದು ಅಪರೂಪದ ಕೃತಿ ಎಂದು ಪ.ಪೂ. ತೋಂಟದ ಸಿದ್ಧರಾಮ ಶಿವಯೋಗಿಗಳು ಅಭಿಪ್ರಾಯ ಪಟ್ಟರು.

ಬೆಳಗಾವಿ ಕೆ.ಎಲ್.ಇ. ಸಂಸ್ಥೆಯ ಚೇರಮನ್ ಡಾ. ಪ್ರಭಾಕರ ಕೋರೆ ಅವರು ಕೃತಿಯನ್ನು ಅವಲೋಕಿಸಿ “ಸಮಾಜಕ್ಕಾಗಿ, ಜನರಿಗಾಗಿ ತಮ್ಮ ಜೀವವನ್ನು ಮುಡಿಪಾಗಿಟ್ಟ ಮಹನೀಯರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಇಂಥ ಕೃತಿಗಳು ಪ್ರಕಟವಾಗಬೇಕು ಎಂದರು. ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವನ್ನು ವಿಕ್ಷೀಸಿದ ಪ.ಪೂ. ಸಿದ್ಧರಾಮ ಶ್ರೀಗಳು, ಪ್ರಭಾಕರ ಕೋರೆಯವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಚಿವ ಡಾ. ಎಂ.ಬಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸುನೀಲ ಗೌಡ ಪಾಟೀಲ, ಸೋಮನಗೌಡ ಪಾಟೀಲ, ಡಾ. ಮಹಾಂತೇಶ ಬಿರಾದಾರ, ಡಾ. ಆರ್.ಎಸ್. ಮುಧೋಳ, ಡಾ. ಶಂಭು ಮೆಹರವಾಡೆ, ಡಾ. ರಾಘವೇಂದ್ರ ಕುಲಕರ್ಣಿ, ಡಾ. ಆರ್.ಬಿ. ಕೊಟ್ನಾಳ, ಪ್ರೊ. ಎಸ್.ಎಚ್. ಲಗಳಿ, ಪ್ರೊ. ಎನ್.ಜಿ. ಕರೂರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಎಂ.ಎಸ್. ಮದಭಾವಿ ಮುಂತಾದವರುಉಪಸ್ಥಿತರಿದ್ದರು.

# ಶ್ರೇಷ್ಠ ಕೃಷಿಕ ಪ್ರಶಸ್ತಿಗಾಗಿ ರೈತರಿಂದ ಅರ್ಜಿ ಆಹ್ವಾನ

**ಜಮಖಂಡಿ :** ಸನ್2024–25 ನೇ ಸಾಲಿನ ಆತ್ಮಯೋಜನೆಯಡಿಯಲ್ಲಿ ಜಿಲ್ಲಾಮಟ್ಟ ಹಾಗೂ ತಾಲೂಕಮಟ್ಟ ಶ್ರೇಷ್ಠ ಕೃಷಿಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿವಿಧ ವಿಭಾಗಗಳಾದ ಕೃಷಿಯಲ್ಲಿ ಸಮಗ್ರಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ ಅಭಿವೃದ್ಧಿ, ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ಕೋಳಿ ಸಾಕಾಣಿಕೆ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಹೈಟೆಕ್ ತಂತ್ರಜ್ಞಾನ ಅಳವಡಿಕೆ (ಹಸಿರು ಮನೆ, ಕಸಿ ಅಭಿವೃದ್ಧಿ, ಸಸ್ಯಕಾಶಿ ಇತ್ಯಾದಿ), ಕೃಷಿ ಸಂರಕ್ಷಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಹಾಗೂ ಇತರೆ ಕೃಷಿ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ರೈತ ಮತ್ತು ರೈತ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಆಗಷ್ಟ್ 16ರ ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಸಮೀಪದ ರೈತ ಸಂಪರ್ಕ ಕೇಂದ್ರಗಳಿಗೆ ಸಂಪರ್ಕಿಸಬಹುದೆಂದು ತಾಲೂಕಾ ಸಹಾಯಕ ಕೃಷಿ ನಿರ್ದೇಶಕ ಎಸ್.ಬಿ.ಪಟ್ಟಿಹಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹದಗೆಟ್ಟ ರಸ್ತೆಯಿಂದ ಹೈರಾಣಾದ ಜನತೆ



**ಬೈಲಹೊಂಗಲ :** ರಸ್ತೆಯಲ್ಲಿ ಗುಂಡಿಗಳೋ..? ಅಥವಾ ಗುಂಡಿಗಳ ಮದ್ಯದಲ್ಲಿ ರಸ್ತೆಯೋ..? ಎಂಬ ಪ್ರಶ್ನೆ ಇಲ್ಲಿ ಸಂಚಾರಿಸುವ ಪ್ರಯಾಣಿಕರನ್ನು ಕಾಡದೆ ಇರಲಾರದು.

ತಾಲೂಕಿನ ಲೋಕೋಪಯೋಗಿ ಇಲಾಖೆಗೆ ಒಳಪಡುವ ಬೈಲಹೊಂಗಲ,ಬೆಳಗಾವಿ ಹಾಗೂ ಜತ್ತ ಜಾ0ಬೋಟಿ ರಾಜ್ಯ ಹೆದ್ದಾರಿಗೆ ಸಂಪರ್ಕಿಸುವ ನೇಸರಗಿ–ಬೈಲವಾಡ ಮಾರ್ಗ ಮದ್ಯದ ಸುಮಾರು 11 ಕಿ. ಮೀ.ನಷ್ಟು ರಸ್ತೆ ಸಂಪೂರ್ಣ ಹದಗೆಟ್ಟಿದೆ. ರಸ್ತೆಯ ಉದ್ದಗಲಕ್ಕೂಆಳುದ್ದ ಬಿದ್ದಿರುವ ಗುಂಡಿಗಳು ಪ್ರಯಾಣಿಕರ ಆತಂಕಕ್ಕೆ ಮನೆಮಾಡಿದೆ.ನೇಸರಗಿ, ಬೈಲವಾಡ, ನಾಗನೂರ ಗ್ರಾಮಗಳ ಜನರು ತಮ್ಮ ದುಡಿಮೆಗೆ, ಶಿಕ್ಷಣಕ್ಕೆ ಹಾಗೂ ತಮ್ಮ ಅವಶ್ಯಕ ವಸ್ತುಗಳ ಖರೀದಿಗೆ ಬೈಲಹೊಂಗಲ ಪಟ್ಟಣವನ್ನೇ ಅವಲಂಬಿಸಿರುವುದರಿಂದ ಶಾಲಾ ಮಕ್ಕಳ,ವೃದ್ಧರು,ಮಹಿಳೆಯರು,ವಾಹನ ಚಾಲಕರು ಹಿಡಿಶಾಪ ಹಾಕುವಂತಾಗಿದೆ.

ಅರ್ಧದಷ್ಟು ಭಾಗ ಬೈಲಹೊಂಗಲ ಹಾಗೂ ಇನ್ನುಳಿದ ಅರ್ಧದಷ್ಟು ಭಾಗ ಕಿತ್ತೂರು ಮತಕ್ಷೇತ್ರಕ್ಕೆ ಒಳಪಡುವುದರಿಂದ ರಸ್ತೆ ಸುಧಾರಣೆ ಮರೀಚಿಕೆಯಾಗಿದೆ ಸಾರ್ವಜನಿಕರು ಆಕ್ರೋಶ ಹೊರ ಹಾಕುತ್ತಿದ್ದಾರೆ.

ಮಳೆಗಾಲ ಪ್ರಾರಂಭವಾಗಿರುವ ಗುಂಡಿಯಲ್ಲಿ ದ್ವಿಚಕ್ರ ವಾಹನಗಳ ಸವಾರರಿಗೆ ಸಂಚಾರ ಸವಾಲಾಗಿದ್ದು, ಈಗಾಗಲೇ ಸಾಕಷ್ಟು ಪ್ರಯಾಣಿಕರು ಸಣ್ಣಪುಟ್ಟ ಅಪಘಾತಕ್ಕೂ ಒಳಗಾಗಿದ್ದಾರೆ. ಮತ್ತಷ್ಟು ಅಪಘಾತಗಳಾಗುವ ಪೂರ್ವದಲ್ಲಿಯೇ ರಸ್ತೆ ದುರಸ್ತಿಯಾಗಬೇಕೆಂಬುದು ಪ್ರಯಾಣಿಕರ ಆಗ್ರಹ.

# ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲು ಕರೆ

**ಚನ್ನಮ್ಮನ ಕಿತ್ತೂರು :** ನಿಮಗೆ ಬೇಕಾಗುವ ಎಲ್ಲ ಸೌಲಭ್ಯಗಳನ್ನು ಕಾರ್ಖಾನೆಯಿಂದ ದೊರಕಿಸಿಕೊಡಲಾಗುವುದು. ನಿಮ್ಮ ಜೊತೆಯಲ್ಲಿ ನಾವಿದ್ದೇವೆ ನೀವೆಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಕಾರ್ಖಾನೆ ಏಳಿಗೆಗೆ ಶ್ರಮವಹಿಸಬೇಕೆಂದು ಕಾರ್ಮಿಕರಿಗೆ ನಿರ್ದೇಶಕರುಗಳಾದ ಸಾವಂತ ಕಿರಬನವರ, ಶಿದ್ದಪ್ಪ ದೂರಪ್ಪನವರ ಜಂಟಿಯಾಗಿ ಹೇಳಿದರು.

ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ನಡೆದ ಕಾರ್ಖಾನೆ ಮಿಲ್ ರೂಲರ್ ಪೂಜೆ ಹಾಗೂ ನಿವೃತ್ತ ಕಾರ್ಮಿಕರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು ಕಾರ್ಖಾನೆ ಆದಷ್ಟು ಬೇಗನೇ ಪ್ರಾರಂಭಿಸೋಣ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಮೊದಲು ಕಂತವಾಗಿ ರೂ. 2800 ರೂ. ಎರಡನೇ ತಿಂಗಳ ನಂತರ 2ನೇ ಕಂತವಾಗಿ ರೂ. 200 ರೂ. ಕೊನೆಗೆ ರೂ. 50/– ಈ ತೆರನಾಗಿ ಕಾರ್ಖಾನೆಗ ಕಬ್ಬು ಪೂರೈಸಿದ ರೈತರಿಗೆ ಹಣ ಬಟವಡೆ ಮಾಡಲಾಗುವುದು. ಅದಕ್ಕಾಗಿ ರೈತರು ಸಹಕರಿಸಿ ಬೇರೆಡೆ ಕಾರ್ಖಾನೆಗಳಿಗೆ ಕಬ್ಬು ಪೂರೈಸದೇ ಈ ಕಾರ್ಖಾನೆ ನಿಮ್ಮದೆಂದು ತಿಳಿದು ಇಲ್ಲಿಯೇ ಕಬ್ಬು ಪೂರೈಸಿದರೆ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಖಾನೆ ಹೊಂದುತ್ತದೆಂಬ ಆತ್ಮವಿಶ್ವಾಸ ನಮಗಿದೆಯೆಂದರು.

ನೂತನ ವ್ಯವಸ್ಥಾಪಕ ನಿರ್ದೇಶಕ ಮೋಹನ ಹಿರೇಮಠ ಮಾತನಾಡಿ ನಿಮ್ಮ ಕಷ್ಟಗಳಿಗೆ ನಿರ್ದೇಶಕ ಮಂಡಳಿ ಮತ್ತು ನಾವಿದ್ದೇವೆ. ಉತ್ತಮವಾಗಿ ಕಬ್ಬು ನೂರಿಸಿ ನಿಮ್ಮ ಪಿಎಫ್ ಸರಿ ಮಾಡಿ ನಿಮ್ಮ ಸಂಭಳ ತಪ್ಪದೇ ಪ್ರತಿ ತಿಂಗಳು ನೀಡಿ ಬೋನಸ್ ಸಹ ನೀಡಲಾಗುವುದು ಇದರಲ್ಲೇನೂ ಎರಡು ಮಾತಿಲ್ಲ ಕಾರ್ಮಿಕರು ಕಾರ್ಖಾನೆಯತ್ತ ಹೆಚ್ಚಿನ ಗಮನ ಹರಿಸಿ ಅಭಿವೃದ್ದಿಗೊಸ್ಕರ ಶ್ರಮವಹಿಸಿ ಅಭಿವೃದ್ಧಿಗೆ ನಿಮ್ಮ ಪಾತ್ರ ಬಹಳ ಮುಖ್ಯ. ರೈತರಿಗೆ ಎಲ್ಲ ವ್ಯವಸ್ಥೆ ಮಾಡಿಕೊಡೋಣವೆಂದರು. ಹಂಗಾಮಿ ಕಾರ್ಮಿಕ ಸಂಘದ ಅಧ್ಯಕ್ಷ ರಾಜೇಂದ್ರ ಶಿರಮೋಜಿ ನಿರೂಪಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಮಿಕರ ಕಷ್ಟ–ನೋವುಗಳಿಗೆ ಸ್ಪಂದಿಸಿ ತಪ್ಪದೇ ಪ್ರತಿ ತಿಂಗಳು ಸಂಬಳ ನೀಡಿ ಅವರ ಪಿಎಫ್ ಸರಿ ಮಾಡಿ ಬೋನಸ್ ನೀಡಬೇಕು ಎಂದರು. ಕಾರ್ಖಾನೆ ಉಪಾಧ್ಯಕ್ಷೆ ಲಕ್ಷ್ಮೀ ಅರಳಿಕಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಖಾನೆ ವಿಭಾಗಾಧಿಕಾರಿಗಳಾದಬಸವರಾಜಇಟಗಿ,ದೇಸಾಯಿ ಕಾರ್ಖಾನೆ–ಕಾರ್ಮಿಕರ ಹಿತನುಡಿಯನ್ನಾಡಿದರು. ಈ ಸಮಯದಲ್ಲಿ ನಿವೃತ್ತಿ ಹೊಂದಿದ ಕಾರ್ಮಿಕರು ಬಸವರಾಜ ಮುತ್ನಾಳ, ಶಿವಪ್ಪ ಕಿಲ್ಲೇದಾರ, ಸುಧೀರ ಕುಲಕರ್ಣಿ, ಸಿದ್ದಪ್ಪ ತಳವಾರ. ನಿರ್ದೇಶಕರುಗಳಾದ ಲಕ್ಷ್ಮಣ ಎಮ್ಮಿ, ಶಂಕರಗೌಡ ಪಾಟೀಲ, ಜ್ಯೋತಿಬಾ ಹೈಬತ್ತಿ, ಮಂಜುನಾಥ ಪಾಟೀಲ, ಬಸವರಾಜ ಪುಂಡಿ, ಅಶೋಕ ಬೆಂಡಿಗೇರಿ, ಭರತೇಶ ಶೇಬಣ್ಣವರ, ಬಸವರಾಜ ಬೆಂಡಿಗೇರಿ, ಸಂಜೀವ ಹುಬಳೇಪ್ಪನವರ, ಮೀನಾಕ್ಷಿ ನೆಲಗಳಿ, ಕಛೇರಿ ಅಧೀಕ್ಷಕ ಬಸವರಾಜ ಪಾಗಾದ, ಕಾರ್ಖಾನೆ ಇಂಜಿನಿಯರಗಳು, ಸಿಬ್ಬಂದಿ ಸೇರಿದಂತೆ ರೈತರಿದ್ದರು.

# ಆತ್ಮ ಹೆಣ್ಣೋ, ಗಂಡೋ ಯಾರಿಗೂ ಗೊತ್ತಿಲ್ಲಾ: ಬಿರಾದಾರ



**ತಾಳಿಕೋಟೆ :** ಆತ್ಮ ಅನ್ನುವದು ಎಲ್ಲಿಂದ ಎಲ್ಲಿಗೆ ಹೋಗುತ್ತದೆ ಬಯಲು ಮುಂದೆ ಬಯಲು ಬಯಲಾಗಿ ಹೋಗುತ್ತದೆ ಅಂದಹಾಗೆ ಆತ್ಮದ ಕುರಿತು ವಿಚಾರ ಮಾಡಿದರೆ ಭಯವಾಗುತ್ತದೆ ಎಂದು ಬೆನಕನಹಳ್ಳಿ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರಾದ ಸಾಹೇಬಗೌಡ ಬಿರಾದಾರ ಅವರು ನುಡಿದರು.

ಸೋಮವಾರರಂದು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ತಾಳಿಕೋಟೆ ವತಿಯಿಂದ ದತ್ತಿ ನಿಧಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಆದ್ಯಾತ್ಮೀಕ ಚಿಂತನೆ ಹಾಗೂ ಕಾಯಕವೇ ಕೈಲಾಸ ಎಂಬ ವಿಷಯ ಕುರಿತು ಮಾತನಾಡುತ್ತಿದ್ದ ಅವರು ಬಸವಣ್ಣನವರು ಹೋದ ಮೇಲೆ 800 ವರ್ಷಗಳು ಘತಿಸಿದ ಮೇಲೆಯೂ ಚಿಂತನೆ ಮಾಡುವಂತಹ ಸ್ಥಿತಿ ಮುಂದುವರೆದಿದೆ ಆತ್ಮ ಪರಮಾತ್ಮ ಅಂದರೆಮನಸ್ಸನ್ನು ದೊಡ್ಡದು ಮಾಡಿಕೊಳ್ಳುವದ್ದಾಗಿದೆ ಎಂದರು. ಕಾಮ, ಕ್ರೋದ, ಮದ, ಮತ್ಸರ ಅಳಿದರೆ ಬಸವಣ್ಣನವರ ತತ್ವ ಅಳವಡಿಸಿ ಕೊಂಡಂತಾಗುತ್ತದೆ ಆದರೆ ಆತ್ಮ ಎಲ್ಲಿಗೆ ಹೋಗುತ್ತದೆ ಎಂಬುದರ ಬಗ್ಗೆ ಯಾರಿಂದಲೂ ಉತ್ತರವಿಲ್ಲಾವೆಂದರು. ಆತ್ಮ ಸಂತೃಪ್ತಿಯಾಗಬೇಕಾದರೆದುಡುಕುವದನ್ನು ನಿಲ್ಲಿಸಬೇಕು ನಿಧಾನವಾಗಿ ಆಲಿಸಿ ಪಾಲಿಸಿದರೆ ಆವಾಗ ತೃಪ್ತಿ ಎಂಬುದು ದೊರೆಯುತ್ತದೆ ಎಂದರು. ಸಂಸಾರದಲ್ಲಿ ಆದ್ಯಾತ್ಮ ಕಾಯಕದಲ್ಲಿಯೇ ತಂದು ಕೊಳ್ಳುವಂತೆ ನೀತಿ ಎಂಬುದನ್ನು ಬಸವಣ್ಣನವರು ತಿಳಿಸಿದ್ದಾರೆ. ಪ್ರಶ್ನೆ ಎಂಬುದರ ಬಗ್ಗೆ ತಿಳಿಸಿಕೊಟ್ಟವರು ಬಸವಣ್ಣನವರು ಆಗಿದ್ದಾರೆಂದು ಹೇಳಿದ ಬಿರಾದಾರ ಅವರು ವಿಭೂತಿ ಲಿಂಗವನ್ನು ಕಟ್ಟಿಕೊಂಡು ಬಸವಣ್ಣನವರ ತತ್ವದೊಂದಿಗೆ ಬಂದಿದ್ದೇವೆ ಎಂದು ಹೇಳಿದ ಅವರು ವಿಶ್ವರಾದ್ಯ, ಭೀಮಾಶಂಕರ ಅವರ ವಿಚಾರಗಳ ಕುರಿತಿ ತಿಳಿಸಿದ ಅವರು ಕಾಯಕದಲ್ಲಿ ಸತ್ಯ ಶುದ್ದತೆ ಎಂಬುದು ಬೇಕೆಂದು ಬಸವಣ್ಣನವರ ಕುರಿತು ಹಾಗೂ ಸೋಮಣ್ಣನವರ ಹಾಗೂ ವಿಜಯಪುರ ಸಿದ್ದೇಶ್ವರ ಮಹಾ ಸವಾಮಿಗಳ ಕುರಿತು, ಅಂಬಿಗೇರ ಚೌಡಯ್ಯ, ಬಸವಣ್ಣನವರ ಕಾಲದ ಶರಣರ ಕುರಿತು ಅವರ ವಿಚಾರಗಳನ್ನು ಸ್ಪಷ್ಟಪಡಿಸಿ ಕಾಯಕವನ್ನು ಮಾಡಬೇಕೆಂಬುದೇ ಅವರೆಲ್ಲರದ್ದಾಗಿತ್ತೆಂದರು.

ಅತಿಥಿಗಳಾಗಿ ಆಗಮಿಸಿದ ಇನ್ನೋರ್ವ ನಿವೃತ್ತ ಶಿಕ್ಷಕರಾದ ಚನ್ನಪ್ಪ ಮೇಣಸಿನಕಾಯಿ ಅವರು ಮಾತನಾಡಿ ಕಾಯಕವೇ ಕೈಲಾಸ ಎಂಬುದರ ಕುರಿತು ಬಸವಣ್ಣನವರ ವಚನಗಳು ಇಂದಿನ ಕಾಲದಲ್ಲಿಯೂ ಪ್ರಸ್ತುತವಾಗಿವೆ ಕಷ್ಟಪಟ್ಟು ದುಡಿದು ತಿನ್ನುವಂತಹ ತತ್ವ ಅವರದ್ದಾಗಿತ್ತು ಕಾಯಕವೇ ಕೈಲಾಸ ಎಂಬುದರ ಕುರಿತು ಅವರು ಅರ್ಥೈಸಿ ತಿಳಿಸಿದ್ದಾರೆ ಆಧುನಿಕ ಮನೋಪೂರ್ವಕವಾಗಿ ಕೆಲಸ ಮಾಡುವದೇ ಒಳ್ಳೆಯ ಕಾಯಕವಾಗುತ್ತದೆ ಪ್ರಚಾರಕ್ಕಾಗಿ ಕಾಯಕವಾಗಬಾರದೆಂದು ಚಿಕ್ಕ ಕಥೆಯೊಂದನ್ನು ಹೇಳಿ ಮನವರಿಕೆ ಮಾಡಿದರು.

ಅಧ್ಯಕ್ಷತೆ ವಹಿಸಿದ ನಿವೃತ್ತ ದೈಹಿಕ ಶಿಕ್ಷಣ ಪರಿವಿಕ್ಷಕರಾದಬಿ.ಆರ್.ಪೊಲೀಸ್‌ಪಾಟೀಲ ಅವರು ಮಾತನಾಡಿ ಆದ್ಯಾತ್ಮ ಚಿಂತನ ಹಾಗೂ ಕಾಯಕವೇ ಕೈಲಾಸ ಎಂಬ ಇಂದಿನ ವಿಚಾರದಾರೆಯನ್ನು ಎಲ್ಲರಿಗೂ ಉಣಬಡಿಸಲು ಪ್ರಯತ್ನಿಸಿದಂತಹ ಮುಖ್ಯ ಅತಿಥಿ ಸಾಹೇಬಗೌಡ ಬಿರಾದಾರ ಅವರ ಮಾತಿನ ಶೈಲಿ ಬಹಳೇ ಮಾರ್ಮಿಕವಾಗಿತ್ತು ಏನೇ ಇರಲಿ ಈ ಹಿಂದಿನ ಶ್ರೀಗಳು ಹಾಕಿಕೊಟ್ಟಂತಹ ಮಾರ್ಗ ಸಾಮಾನ್ಯವಲ್ಲಾ ಆ ಮಾರ್ಗದತ್ತ ಸಾಗಿದರೆ ಮೋಕ್ಷವೆಂಬ ಮಾರ್ಗ ತಾನೇ ದೊರಕುತ್ತದೆ ಎಂದರು.

ಕಾರ್ಯಕ್ರಮದಮೊದಲಿಗೆದತ್ತಿದಾನಿಗಳಾದ ಶ್ರೀನಿವಾಸ ಸೋನಾರ ಎಂಬುವವರು ತಮ್ಮ ತಂದೆ ಲಿಂ.ಶಂಕ್ರೆಪ್ಪ ಸೋನಾರ, ತಾಯಿ ಲಿಂ.ಶ್ರೀಮತಿ ಸುಮಿತ್ರಾಬಾಯಿ ಸೋನಾರ ಅವರ ಸ್ಮರಣೆಯನ್ನು ಏರ್ಪಡಿಸಿದ್ದರಲ್ಲದೇ ಇದು ಅಲ್ಲದೇ ಇದೇ ಸಮಯದಲ್ಲಿ ದತ್ತಿದಾನಿಗಳಾದಕಸಾಪಮಾಜಿಅಧ್ಯಕ್ಷರಾದ ಶ್ರೀಮತಿ ಶಾಂತಾಯಿ ನೂಲಿಕರ ಅವರು ತಮ್ಮ ಪತಿದೇವರಾದ ಲಿಂ.ಸಕಾರಾಮ ನೂಲಿಕರ ಅವರ ಸ್ಮರಣೆಯನ್ನೂ ಸಹ ಉಪಸ್ಥಿತ ಅತಿಥಿ ಮಹೋದಯರೊಂದಿಗೆ ಹಾಗೂ ಕಸಾಪ ಪದಾಧಿಕಾರಿಗಳೊಂದಿಗೆ ಉಭಯಸ್ತರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಗೈಯುವದರೊಂದಿಗೆ ಸ್ಮರಣೆ ಮಾಡಿದರು.

ಇದೇ ಸಮಯದಲ್ಲಿ ನಾಟ್ಯ ಮಯೂರಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತೆ ಕುಮಾರಿ ಪೃಥ್ವಿ ಹೆಗಡೆ ಅವರ ತಂದೆಯಾದ ಮಂಜುನಾಥ ಹೆಗಡೆ ಅವರಿಗೆ ಹಾಗೂ ಸ್ನಾತಕೋತ್ತರ ಪಧವಿಯಲ್ಲಿ ಚಿನ್ನದ ಪಧಕ ಪಡೆದ ಕುಮಾರಿ ಸಾಕ್ಷೀ ಕತ್ತಿ ಅವರ ತಂದೆಯಾದ ಗುರುಸಂಗಪ್ಪ ಕತ್ತಿ ಅವರಿಗೆ ಕಸಾಪದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ದತ್ತಿ ನಿಧಿ ಉಪನ್ಯಾಸ ಕಾರ್ಯಕ್ರಮವನ್ನು ಪುರಸಭಾ ಸದಸ್ಯ ಪ್ರಭುಗೌಡ ಮದರಕಲ್ಲ ಅವರು ಉದ್ಘಾಟಿಸಿದರು. ವೇದಿಕೆಯ ಮೇಲೆ ಅಬ್ದುಲ್‌ಗನಿ ಮಕಾಂದಾರ ಉಪಸ್ಥಿತರಿದ್ದರು.

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಆರ್.ಎಲ್.ಕೊಪ್ಪದ ಅವರು ಈ ಹಿಂದಿನಿಂದ ನಡೆಸಿಕೊಂಡು ಬಂದಂತಹ ದತ್ತಿ ನಿಧಿ ಉಪನ್ಯಾಸ ಕಾರ್ಯಕ್ರಮಗಳ ಬಗ್ಗೆ ಉಪಸ್ಥಿತ ಕಸಾಪ ಸದಸ್ಯರುಗಳ ಮುಂದೆ ವಿವರಿಸಿದರು.

ದತ್ತಿದಾನಿಗಳಾದ ಶ್ರೀನಿವಾಸ ಸೋನಾರ, ಉದಯಕುಮಾರ ಸೋನಾರ, ವೇಂಕಟೇಶ ಸೋನಾರ, ಸೌಮ್ಯಾ ಸೋನಾರ, ಸುಮತಾ ಸೋನಾರ, ಹಾಗೂ ಶ್ರೀಮತಿ ಶಾಂತಾಬಾಯಿ ನೂಲಿಕರ, ಶ್ರೀಮತಿ ಯಶೋದಾ ಶೇವಳಕರ, ಉಪಸ್ಥಿತರಿದ್ದರು. ಈ ಸಮಯದಲ್ಲಿ ಪ್ರಭುಗೌಡ ಚೌದ್ರಿ, ಉಪನ್ಯಾಸಕಿ ಅಶ್ವಿನಿ ಜೋಗೂರ, ಸಿದ್ದಾರ್ಥ ಕಟ್ಟಿಮನಿ, ಅಶೋಕ ಹಂಚಲಿ, ನಿಂಗಣ್ಣ ಕುಂಟೋಜಿ, ಶ್ರೀಮತಿ ಉಮಾ ಘೀವಾರಿ, ಅಣ್ಣು ವಾಲಿ, ಎಂ.ಎಸ್.ಬಿರಾದಾರ, ಜಗದೀಶ ಬಿಳೇಭಾವಿ, ಡಾ.ನಜೀರ ಕೋಳ್ಯಾಳ, ಶಿಕ್ಷಕ ವಿಶ್ವನಾಥ ಪಾಟೀಲ, ಸಂಗನಗೌಡ ಅಸ್ಕಿ, ಮಹಾಂತೇಶ ಮುರಾಳ, ಎಂ.ಜಿ.ಕತ್ತಿ, ಆರ್.ವ್ಹಿ.ಜಾಲವಾದಿ, ಮೊದಲಾದವರು ಉಪಸ್ಥಿತರಿದ್ದರು.

ಎಸ್.ವ್ಹಿ.ಜಾಮಗೊಂಡಿ ಸ್ವಾಗತಿಸಿದರು. ಶಿಕ್ಷಕ ಆರ್.ಬಿ.ದಾನಿ ನಿರೂಪಿಸಿದರು. ಕಸಾಪ ತಾಲೂಕಾ ಅಧ್ಯಕ್ಷ ಆರ್.ಎಲ್. ಕೊಪ್ಪದ ವಂದಿಸಿದರು.

# ನಾಗಠಾಣದಲ್ಲಿ ಅಂತರಾಷ್ಟ್ರೀಯ ಸ್ನೇಹಿತರ ದಿನ ಆಚರಣೆ

**ವಿಜಯಪುರ :** ಸ್ನೇಹ ಎಂಬ ಒಳ್ಳೆಯ ಬಾಂಧವ್ಯದ ಮಹತ್ವವನ್ನು ಸಾರಲು ಪ್ರತಿ ವರ್ಷ ಜುಲೈ 30 ರಂದು ಅಂತರಾಷ್ಟ್ರೀಯ ಸ್ನೇಹಿತರ ದಿನವನ್ನು ಆಚರಣೆ ಮಾಡಲಾಗುತ್ತದೆ. ಈ ನಿಮಿತ್ತ ತಾಲೂಕಿನ ನಾಗಠಾಣ ಗ್ರಾಮದ ಅನುಶ್ರೀ, ಶ್ರೀನಿಧಿ, ದೀಪಾ, ಸಾಕ್ಷಿ, ಶಾಂತಮ್ಮ, ಮೋಕ್ಷ, ಸಮೃದ್ಧಿ, ಪವಿತ್ರಾ ಸೇರಿದಂತೆ ಅನೇಕ ಮಕ್ಕಳು ಪರಸ್ಪರ ಹಸ್ತಲಾಘವ ಮಾಡಿ ಅಂತರಾಷ್ಟ್ರೀಯ ಸ್ನೇಹಿತರ ದಿನವನ್ನು ಆಚರಿಸಿದರು.

ಫ್ರೆಂಡ್‌ಶಿಪ್ ಇದೊಂದು ಸುಮಧುರ ಬಾಂಧವ್ಯ. ನಮಗೆ ಯಾವುದೇ ಸಮಸ್ಯೆಯಿದ್ದರೂ ಅದಕ್ಕೊಂದು ಪರಿಹಾರ ನಮ್ಮ ಗೆಳೆಯರ ಬಳಿ ಇರುತ್ತದೆ ಎಂಬ ಬಲವಾದ ನಂಬಿಕೆ. ಸುಖ–ದುಃಖ, ನೋವು–ನಲಿವುಗಳಲ್ಲಿ ನಮ್ಮ ಕುಟುಂಬದವರಂತೆ ನಮ್ಮೊಂದಿಗೆ ಇರುವುದು ನಮ್ಮ ಸ್ನೇಹಿತರು. ಈ ಸ್ನೇಹ ಬಾಂಧವ್ಯ ಶುದ್ಧ ಸ್ವರೂಪದ್ದಾಗಿದ್ದು, ರಕ್ತ ಸಂಬಂಧವಲ್ಲವಾದರೂ ಪ್ರೀತಿಯಿಂದ ಕೂಡಿದೆ. ಯಾವುದೇ ಜಾತಿ, ಬಣ್ಣ, ಜನಾಂಗ, ಸಂಸ್ಕೃತಿಯ ಬೇಧವಿಲ್ಲದೇ ಸ್ನೇಹದ ಬಲವಾದ ಬಂಧ ಮತ್ತು ಪ್ರೀತಿಯ ಪ್ರಾಮುಖ್ಯತೆಯನ್ನು ಸಾರಲು ಈ ದಿನವನ್ನು ಆಚರಣೆ ಮಾಡಲಾಗುತ್ತದೆ.

ಮನುಷ್ಯನನ್ನು ಸಮಾಜದಲ್ಲಿ ಒಂದಾಗಿಸುವುದು ಗೆಳೆಯರ ಗುಂಪು. ಪುರಾಣ, ಇತಿಹಾಸ ಕಾಲದಿಂದಲೂ ಸ್ನೇಹಕ್ಕೆ ತನ್ನದೇ ಆದ ಸ್ಥಾನಮಾನ, ಗೌರವ, ಆದರ, ಆತಿಥ್ಯವಿದೆ. ಮಹಾಭಾರತದಲ್ಲಿ ಕಂಡುಬರುವ ದುರ್ಯೋಧನ ಮತ್ತು ಕರ್ಣ ಅವರಿಬ್ಬರ ಅಪ್ರತಿಮ ಗೆಳೆತನ ಇಂದಿಗೂ ಚಿರಸ್ಥಾಯಿಯಾಗಿದೆ.

ಜನರನಡುವೆಸ್ನೇಹವಿದ್ದರೆಸಮುದಾಯಗಳ ನಡುವೆ ಬಾಂಧವ್ಯವೃದ್ಧಿಯಾಗುತ್ತದೆ. ವಿಶ್ವದ ಎಲ್ಲ ದೇಶಗಳ ನಡುವೆ ಉತ್ತಮ ಬಾಂಧವ್ಯ ವೃದ್ಧಿ, ವಿಶ್ವ ಶಾಂತಿಗೆ ಸ್ಫೂರ್ತಿಯಾಗುತ್ತದೆ ಎನ್ನುವ ಉದ್ದೇಶದಿಂದ ಈ ಆಚರಣೆಯು ಮಹತ್ವ ಪಡೆದುಕೊಂಡಿದೆ.

# ಪ್ರವಾಹ ಸಂತ್ರಸ್ತರಿಗೆ ಸಕಲ ವ್ಯವಸ್ಥೆ



**ಬೆಳಗಾವಿ :** ಅತಿವೃಷ್ಟಿ ಹಾಗೂ ನದಿಯ ಹಿನ್ನೀರು ಮನೆಗಳಿಗೆ ನುಗ್ಗಿರುವ ಹಿನ್ನೆಲೆಯಲ್ಲಿ ಗೋಕಾಕ ನಗರದ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಗೊಂಡಿರುವ ಕುಟುಂಬಸ್ಥರನ್ನು ಖುದ್ದಾಗಿ ಭೇಟಿ ಮಾಡಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು, ಸಂತ್ರಸ್ತರಿಗೆ ಸಂಪರ್ಣ ನೆರವು ಕಲ್ಪಿಸುವ ಭರವಸೆ ನೀಡಿದರು.

ಕಾಳಜಿ ಕೇಂದ್ರಗಳಲ್ಲಿ ಕಲ್ಪಿಸಲಾಗಿರುವ ಊಟೋಪಹಾರ ಮತ್ತಿತರ ಮೂಲಸೌರ್ಯಗಳನ್ನು ಪರಿಶೀಲಿಸಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸ್ವತಃ ಗೋಕಾಕ ನಗರದ ಸರಕಾರಿ ಮುನ್ಸಿಪಲ್ ಪದವಿಪರ್ವ ಕಾಲೇಜಿನಲ್ಲಿ ಆರಂಭಿಸಲಾಗಿರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂರ್ಭದಲ್ಲಿ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ಸರಕಾರವು ಸಂತ್ರಸ್ತರಿಗೆ ಎಲ್ಲ ರೀತಿಯ ನೆರವು ನೀಡುತ್ತಿದ್ದು, ಯಾವುದೇ ಕಾರಣಕ್ಕೂ ಆತಂಕಕ್ಕೆ ಒಳಗಾಗಬಾರದು ಎಂದು ಹೇಳಿದರು.

ಕಾಳಜಿ ಕೇಂದ್ರದಲ್ಲಿರುವ ಎಲ್ಲರಿಗೂ ಉತ್ತಮಗುಣಮಟ್ಟದ ಊಟೋಪಹಾರ ವ್ಯವಸ್ಥೆ ಕಲ್ಪಿಸಲಾಗಿದ್ದು, ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಕೂಡ ಒದಗಿಸಲಾಗಿರುತ್ತದೆ. ನದಿತೀರದ ಕೆಲವು ಗ್ರಾಮಸ್ಥರು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಗೊಳ್ಳಲು ನಿರಾಕರಿಸುತ್ತಿರುವಬಗ್ಗೆಪ್ರಸ್ತಾಪಿಸಿದಅವರು, ಪ್ರತಿಯೊಬ್ಬರ ಜೀವ ಅಮೂಲ್ಯವಾಗಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಕಾಳಜಿ ಕೇಂದ್ರ ಅಥವಾ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ಮನವಿ ಮಾಡಿಕೊಂಡರು.

ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದುಕೊಂಡಿದ್ದ ತುಂಬು ರ್ಭಿಣಿಯೊಬ್ಬರನ್ನು ಮಾತನಾಡಿಸಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು, ಕೂಡಲೇ ಆಸ್ಪತ್ರೆಗೆ ದಾಖಲಾಗುವಂತೆ ತಿಳಿಸಿದರು.

ಇದಾದ ಬಳಿಕ ಗೊಡಚಿನಮಲ್ಕಿ ಜಲಪಾತ ಪ್ರದೇಶವನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ನೀರಿನಹರಿವು ಹೆಚ್ಚಾಗಿರುವುದರಿಂದ ಅಗತ್ಯ ಎಚ್ಚರಿಕೆ ವಹಿಸುವಂತೆ ಪೊಲೀಸ್ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಗೆ ನರ್ದೇಶನ ನೀಡಿದರು.

ಗೋಕಾಕ ತಹಶೀಲ್ದಾರ ಮೋಹನ ಭಸ್ಮೆ, ನೋಡಲ್ ಅಧಿಕಾರಿ ಬಸವರಾಜ ಕುರಿಹುಲಿ ಮತ್ತಿತರರು ಈ ಸಂರ್ಭದಲ್ಲಿ ಉಪಸ್ಥಿತರಿದ್ದರು.

**ಸಹಾಯವಾಣಿಗೆ ಕರೆ ಮಾಡಲು ಮನವಿ:**

ನದಿತೀರದ ಗ್ರಾಮಸ್ಥರು ಪ್ರವಾಹದಿಂದ ಯಾವುದೇ ರೀತಿಯ ತೊಂದರೆ ಅಥವಾ ಅಪಾಯಕ್ಕೆ ಸಿಲುಕಿದರೆ ತಕ್ಷಣವೇ ಸಹಾಯವಾಣಿ ಕೇಂದ್ರಕ್ಕೆ ಕರೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

**ಪ್ರವಾಹ ಸಹಾಯವಾಣಿ**
**ಸಂಖ್ಯೆಗಳು–0831–2407290**
**ಪೊಲೀಸ್**
**ಸಹಾಯವಾಣಿ–0831–2474054**
**ತರ್ತು ಸಹಾಯಕ್ಕಾಗಿ –112**

# ಪ್ರವಾಹದಿಂದ ಜೀವಹಾನಿ ಆಗದಂತೆ ಮುನ್ನೆಚ್ಚರಿಕೆಗೆ ಸೂಚನೆ



**ಬೆಳಗಾವಿ :** ಜಿಲ್ಲೆಯ ಪ್ರತಿಯೊಬ್ಬ ತಹಶೀಲ್ದಾರರು ತಮ್ಮ ವ್ಯಾಪ್ತಿಯಲ್ಲಿರುವ ಕಾಳಜಿ ಕೇಂದ್ರಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕು; ಯಾವುದೇ ಕಾರಣಕ್ಕೂ ಜನರು ಮತ್ತು ಜಾನುವಾರುಗಳ ಪ್ರಾಣಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕಾಳಜಿ ಕೇಂದ್ರಗಳಲ್ಲಿ ಊಟೋಪಹಾರ, ಔಷಧ ಸಾಮಗ್ರಿಗಳ ಕೊರತೆಯಾಗದಂತೆ ಮುನ್ನಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿಪುಲ್ ಬನ್ಸಾಲ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅತಿವೃಷ್ಟಿಯಿಂದ ಉಂಟಾಗಿರುವ ಹಾನಿ ಹಾಗೂ ಪ್ರವಾಹ ನಿರ್ವಹಣೆ ಕುರಿತು ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆಗಸ್ಟ್ ನಲ್ಲಿ ಮಳೆಯ ಪ್ರಮಾಣ ಹೆಚ್ಚಾಗುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲ ಕಾಳಜಿ ಕೇಂದ್ರಗಳಲ್ಲಿ ಅಗತ್ಯ ಆಹಾರ ಸಾಮಗ್ರಿ, ಔಷಧ ಮತ್ತು ನೀರು ಮತ್ತಿತರ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಜಾನುವಾರು ಶಿಬಿರಗಳಲ್ಲಿ ಮೇವು ದಾಸ್ತಾನು ಇಟ್ಟುಕೊಳ್ಳಬೇಕು.

2019ರಲ್ಲಿ ಉದ್ಭವಿಸಿದ್ದ ಸಮಸ್ಯೆಗಳನ್ನು ತಿಳಿದುಕೊಂಡು ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಎಲ್ಲ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.

ಕಾಳಜಿ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆಯಾಗದಂತೆ ಕ್ರಮ ವಹಿಸಬೇಕು. ಈಗಾಗಲೇ ಸಿದ್ಧತೆ ಮಾಡಿಕೊಂಡಿರುವುದರಲ್ಲಿ ಯಾವುದೇ ಸಮಸ್ಯೆಗಳಿದ್ದರೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವಂತೆ ಸೂಚನೆ ನೀಡಿದರು.

# ಮೀನುಗಾರಿಕೆ ಇಲಾಖೆ: ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಕೊಪ್ಪಳ :** 2024–25ನೇ ಸಾಲಿನ ಮೀನುಗಾರಿಕೆ ಇಲಾಖೆಯ ಜಿಲ್ಲಾ ವಲಯ, ರಾಜ್ಯ ವಲಯ ಹಾಗೂ ಕೇಂದ್ರ ವಲಯದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಒಳನಾಡು ಮೀನುಗಾರರು/ಮೀನು ಕೃಷಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ವಲಯ, ರಾಜ್ಯ ವಲಯ ಹಾಗೂ ಕೇಂದ್ರ ವಲಯದ ಯೋಜನೆಗಳಾದ ಕಿಟ್ಟುಗಳ ಖರೀದಿಗೆ ಸಹಾಯಧನ, ಮೀನುಮರಿ ಖರೀದಿಗೆ ಸಹಾಯಧನ, ಕೆರೆಯ ಅಂಚಿನಲ್ಲಿ ಮೀನುಮರಿ ಪಾಲನಾ ಕೊಳ ನಿರ್ಮಾಣಕ್ಕೆ ಸಹಾಯಧನ, ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗ), ಮೀನುಕೊಳ ನಿರ್ಮಾಣಕ್ಕೆ ಸಹಾಯಧನ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗ) ಮತ್ತು ಮತ್ಸ್ಯ ವಾಹಿನಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೊಪ್ಪಳ ಹಾಗೂ ಯಲಬುರ್ಗಾ ತಾಲ್ಲೂಕುಗಳ ನೋಂದಾಯಿತ ಮೀನುಗಾರಿಕೆ ಸಹಕಾರಿ ಸಂಘಗಳಲ್ಲಿನ ಮೀನುಗಾರರಿಗೆ ಮೊದಲ ಆದ್ಯತೆಯ ಷರತ್ತಿಗೊಳಪಟ್ಟು ಅರ್ಜಿ ಆಹ್ವಾನಿಸಿದ್ದು, ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಆಗಸ್ಟ್ 30 ಕೊನೆಯ ದಿನವಾಗಿದ್ದು, ಆಸಕ್ತರು ಕಚೇರಿ ವೇಳೆಯಲ್ಲಿ ಕಚೇರಿಗೆ ಭೇಟಿ ನೀಡಿ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳು ಆತ್ಮ ವಿಶ್ವಾಸದೊಂದಿಗೆ ದೈಹಿಕ ಆರೋಗ್ಯ ವಿಕಸನಗೊಳಿಸಿಕೊಳ್ಳಬೇಕು: ಡಾ. ಸುರೇಶ ಡಿ. ಹೊರಕೇರಿ

**ಹುಬ್ಬಳ್ಳಿ :** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ಭಾಗವಹಿಸಿ ಸೇವಾ ಮನೋಭಾವವನ್ನು ಬೆಳೆಸಿಕೊಂಡು ಸ್ವಚ್ಚ, ಸಮೃದ್ಧನಾಡುಕಟ್ಟುವಕೆಲಸಕ್ಕೆಕೈಜೊಡಿಸಬೇಕು ಎಂದು ಕೆ.ಎಲ್.ಇ ಟೆಕ್ ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಹೇಳಿದರು.

ಅವರು ಜೆ.ಎಸ್.ಎಸ್. ಸಕ್ರಿ ಕಾನೂನು ಮಹಾವಿದ್ಯಾಲಯವು ಆಯೋಜಿಸಿದ್ದ ರಾಷ್ಟ್ರೀಯಸೇವಾಯೋಜನಾಘಟಕ,ವಾರ್ಷಿಕ ವಿಶೇಷ ಶಿಬಿರ 2023-24 ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಮಾನಸಿಕ ಹಾಗೂ ದೈಹಿಕ ಆರೋಗ್ಯದೊಂದಿಗೆ ವ್ಯಕ್ತಿತ್ವ ವಿಕಸನಗೊಳಿಸುವುದೇ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರಗಳ ಮೂಲ ಉದ್ಧೇಶವಾಗಿದೆ. ಪರಿಸರ ಪ್ರಜ್ಞೆ, ನಾಗರಿಕ ಪ್ರಜ್ಞೆ, ಸ್ವಚ್ಛತೆ, ಶಿಕ್ಷಣ, ಆರೋಗ್ಯ, ರಾಷ್ಟ್ರೀಯ ಏಕತೆ, ವಿಭಿನ್ನ ಸಂಸ್ಕೃತಿಯ ಪರಿಚಯ, ಎಲ್ಲರನ್ನು ಪ್ರೀತಿ, ಗೌರವದಿಂದ ಕಾಣುವುದು, ಮುಂತಾದ ವಿಷಯಗಳ ಕುರಿತು ಅರಿವು ಮೂಡಿಸುವುದು, ವಿದ್ಯಾರ್ಥಿಗಳಿಗೆ ಶಿಸ್ತು, ಸಮಯಪ್ರಜ್ಞೆಯನ್ನು ಕಲಿಸಿಕೊಡುತ್ತದೆ. ಸೇವಾ ಮನೋಭಾವ ರೂಡಿಸಿಕೊಳ್ಳಬೇಕು. ಮೊಬೈಲ್‌ಗಳನ್ನು ಎಷ್ಟು ಬೇಕೋ ಅಷ್ಟು ಬಳಕೆ ಮಾಡಬೇಕು. ವಿದ್ಯಾರ್ಥಿಗಳಿಗೆ ಗ್ರಾಮದ ಬದುಕನ್ನುಪರಿಚಯಿಸುವುದು.ಅವರಸಂಸ್ಕೃತಿ, ಶ್ರಮದ ಮಹತ್ವ, ಆಚಾರ, ವಿಚಾರಗಳನ್ನು ತಿಳಿಸುವುದು. ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶನ ಗೊಳ್ಳುವುದು. ಶಿಬಿರಗಳನ್ನು ಗ್ರಾಮಗಳಲ್ಲಿ ಆಯೋಜಿಸುವುದರಿಂದ ಗ್ರಾಮದ ಜನರ ಬದುಕನ್ನುಸುಧಾರಿಸುವುದು.ಗ್ರಂಥಾಲಯಗಳ ಮಹತ್ವ ತಿಳಿಸಿದರು. ವಿದ್ಯಾರ್ಥಿಗಳು ಪುಸ್ತಕ ಓದುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸಾಹಿತಿ,ನಿವೃತ್‌ಪ್ರಾಚಾರ್ಯಪ್ರೊಶಂಕರಗೌಡ್ರ ಸಾತ್ಮಾರಅವರುಮಾತನಾಡಿರಾಷ್ಟ್ರೀಯಸೇವಾ



ಯೋಜನೆ(ಎನ್‌ಎಸ್‌ಎಸ್). ಶಿಬಿರಗಳು ಮನಸ್ಸುಗಳನ್ನು ಪರಿವರ್ತಿಸುತ್ತವೆ. ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಸಮಾಜಕ್ಕೆ ಯಾವುದೇ ಅಪೇಕ್ಷೆ ಇಲ್ಲದೆ ಸೇವೆ ಸಲ್ಲಿಸುವ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಪ್ರಕೃತಿಯೊಂದಿಗೆ ಬೆರೆಯಬೇಕು. ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಸಮಾಜದಲ್ಲಿ ಹಾಗೂ ಸುತ್ತಮೂತ್ತ ಆಗುವ ಬದಲಾವಣೆಗಳನ್ನು ತಿಳಿದುಕೊಳ್ಳುವ ಗುಣ ಬೆಳೆಸಿಕೊಳ್ಳಬೇಕು ಎಂದರು.

ಶ್ರೀಕ್ಷೇತ್ರಧರ್ಮಸ್ಥಳಗ್ರಾಮಾಭಿವೃದ್ಧಿಯೋಜನೆ ಬಿ.ಸಿ.ಟ್ರಸ್ಟನ ಜ್ಞಾನವಿಕಾಸ ಸಮನ್ವಯ ಅಧಿಕಾರಿ ವಿಜಯಲಕ್ಷ್ಮೀ ಅವರು ಮಾತನಾಡಿ ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮಗಳ ಅಭಿವೃದ್ದಿಗೆ ತುಂಬಾ ಸಹಕಾರಿಯಾಗಿದೆ. ಮಹಿಳೆಯರ ಸರ್ವತೋಮುಖ ಅಭಿವೃದ್ದಿಗೆ ಕಾರಣವಾಗಿದೆ. ಮಹಿಳೆಯರ ಆರ್ಥಿಕ ಪ್ರಗತಿಗೆ ಸಹಾಯವನ್ನು ಒದಗಿಸುತ್ತಿದೆ. ವಾತ್ಸಲ್, ಜನಮಂಗಳ ಯೋಜನೆಗಳು ಜನರಿಗೆ ತುಂಬಾ ಅನುಕೂಲವಾಗಿವೆ. ಶೌರ್ಯ ವಿಪತ್ತು ತಂಡ ತುರ್ತು ಪರಿಸ್ಥಿತಿಯಲ್ಲಿ ಉತ್ತಮ ಕಾರ್ಯಮಾಡುತ್ತಿದೆ ಎಂದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಮಹತ್ವ ಹಾಗೂ ಕಾರ್ಯಚಟುವಟಿಕೆಗಳನ್ನು ವಿವರವಾಗಿ ತಿಳಿಸಿಕೊಟ್ಟರು.

ಅಧ್ಯಕ್ಷತೆವಹಿಸಿದ್ದಜೆ.ಎಸ್.ಎಸ್.ಸಕ್ರಿಕಾನೂನು ಮಹಾವಿದ್ಯಾಲಯ ಪ್ರಾಧ್ಯಾಪಕಿ ಪ್ರೊ ಶೋಭಾ ಜಾಬಿನ್ ಅವರು ಮಾತನಾಡಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳೆವಣಿಗೆಗಾಗಿ ಆಯೋಜಿಸುವ ಇಂತಹ ಶಿಬಿರಗಳ ಪ್ರಯೋಜನ ಪಡೆದುಕೊಳ್ಳಬೇಕು. ಮಕ್ಕಳು ಉತ್ತಮ ಆರೋಗ್ಯವನ್ನು ಹೊಂದಲು ಉತ್ತಮ ಆಹಾರ ಸೇವನೆ, ಹೆಚ್ಚು ನೀರು ಕುಡಿಯಬೇಕು. ಪರಮ ಪೂಜ್ಯ ಶ್ರೀ ಡಿ. ವಿರೇಂದ್ರ ಹೆಗ್ಗಡೆ ಅವರು ಮಾಡುವ ಸತ್ಕಾರ್ಯಗಳನ್ನು ಸ್ಮರಿಸಿದರು. ಅವರ ಸಂಸ್ಥೆಯಲ್ಲಿ ಓದುವ, ಕೆಲಸ ಮಾಡುವ ನಾವೆಲ್ಲರೂ ಪುಣ್ಯವಂತರು ಎಂದರು. ಹಲವಾರು ಉತ್ತಮ ಸಮಾಜಮುಖಿ ಕಾರ್ಯಮಾಡುತ್ತಿರುವ ಕ್ರೀಯಾಶೀಲ ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತುಂಬಾ ಸಂತೋಷವಾಗಿದೆ. ಅವರ ಕಾರ್ಯಗಳು ಶ್ಲಾಘನೀಯವಾಗಿವೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ರಾಷ್ಟ್ರೀಯಸೇವಾಯೋಜನೆಅಧಿಕಾರಿ ಸುರೇಶ ಎಂ. ಲಿಂಬಿಕಾಯಿ, ಪ್ರೊ ಬಾಬುಲಾಲ್ ಆರ್. ದರಗದ,ಪ್ರೊಶ್ರೀಶೈಲಾಮುಧೋಳ,ಪ್ರೊದೀಪಾ ಎಂ. ಪಾಟೀಲ, ಶೇಖರಗೌಡ, ಮಂಜುಳಾ, ಗ್ರಾಮದ ಹಿರಿಯರು, ಶಿಕ್ಷಕರು, ವಿದ್ಯಾರ್ಥಿಗಳು, ಮುಂತಾದವರು ಭಾಗವಹಿಸಿದ್ದರು. ಗೌರಮ್ಮ ಹೊಸಮನಿ ಪ್ರಾರ್ಥಿಸಿದರು. ವಿನಾಯಕ ಬಾದರಿ ಸ್ವಾಗತಿಸಿದರು. ರಾಘವೇಂದ್ರ ಕಲಾಲ, ನಿರೂಪಿಸಿದರು. ನಿವೇದಿತಾ ಹೆಳವರ ವಂದಿಸಿದರು.

# ದುಶ್ಚಟಗಳನ್ನು ಬಿಡುವುದರಿಂದ ಆರೋಗ್ಯ ಸುಧಾರಣೆ

**ಧಾರವಾಡ :** ಇಲಕಲ್ಲ ಚಿತ್ತರಗಿ ಮಹಾಂತಮಠದ ಡಾ.ಮಹಾಂತ ಶಿವಯೋಗಿ ಅಪ್ಪಗಳು, ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ನಿರಂತರವಾಗಿ ಶ್ರಮಿಸಿದ್ದಾರೆ. ಡಾ. ಮಹಾಂತ ಶಿವಯೋಗಿಗಳು ತೋರಿದ ದಾರಿಯಲ್ಲಿ ಪ್ರತಿಯೊಬ್ಬರೂ ಸಾಗಿದರೆ ಆರೋಗ್ಯಕ ಸಮಾಜ ಹೊಂದಲು ಸಾಧ್ಯವಾಗುತ್ತದೆ ಎಂದುವಿಧಾನಪರಿಷತ್‌ಸಭಾಪತಿ ಬಸವರಾಜ ಹೊರಟ್ಟಿ ಅವರು ಅಭಿಪ್ರಾಯಪಟ್ಟರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಹಾಗೂ ಸುಧಾರಣೆ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಹಾಗೂ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಮಾತನಾಡಿದರು.

ದುಶ್ಚಟಗಳನ್ನು ಬಿಡುವುದರಿಂದ ದೈಹಿಕ ಆರೋಗ್ಯ ಸುಧಾರಣೆ-ಯಾಗುತ್ತದೆಜೊತೆಗೆಆರ್ಥಿಕವಾಗಿ ಸದೃಡರಾಗಲೂ ಸಾಧ್ಯವಿದೆ. ದುಶ್ಚಟಗಳಿಗೆ ದಾಸರಾಗಿ ನಿತ್ಯ ಕಣ್ಣೀರಿಡುವ ಕುಟುಂಬಗಳಿಗೆ ನೆಮ್ಮದಿ ಕಲ್ಪಿಸಿದ ಶ್ರೇಯಸ್ಸು ಮಹಾಂತ ಶಿವಯೋಗಿಗಳಿಗೆ ಸಲ್ಲುತ್ತದೆ ಎಂದರು.

ಮಹಾಂತ ಅಪ್ಪಗಳು, ವ್ಯಸನ ಮುಕ್ತ ಸಮಾಜ ರೂಪಿಸಲು ಜೋಳಿಗೆ ಹಾಕಿದ್ದು ಮಾತ್ರವಲ್ಲ, ಹೊರದೇಶದಲ್ಲೂ ವ್ಯಸನ ಮುಕ್ತ ಸಮಾಜಕ್ಕಾಗಿ ಕಾರ್ಯಕ್ರಮ ಮಾಡಿ, ಸಮಾಜ ಸುಧಾರಣೆಗೆ ಶ್ರಮಿಸಿದರು ಎಂದರು.

ಮುಖ್ಯ ಅತಿಥಿಗಳಾಗಿ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತರಾದ ಎನ್. ಶಶಿಕುಮಾರ ಅವರು ಭಾಗವಹಿಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲಬ್ಯಾಕೋಡಅವರು ಮಾತನಾಡಿ, ಸಣ್ಣ ವಯಸ್ಸಿನ ಮಕ್ಕಳು ಗಾಂಜಾ, ಡ್ರಗ್ಸ್ ದಂತಹ ದುಶ್ಚಟಗಳಿಗೆ ಬಲಿ ಆಗುತ್ತಿದ್ದಾರೆ. ಇವರಿಗೆ ಪಾಲಕರು ಇತರರು ಸರಿಯಾಗಿಗಮನಿಸದೇಇರುವುದು ಕಾರಣವಾಗಿದೆ. ಪಾಲಕರು ಮಕ್ಕಳ ಪಾಲನೆ ಬಗ್ಗೆ ಜವಾಬ್ದರಿಯಿಂದ ವರ್ತಿಸಬೇಕೆಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಮಾತನಾಡಿ, ಇಲಕಲ್ಲ ಮಹಾಂತ ಅಪ್ಪಗಳನ್ನು ಬಾಲ್ಯದಿಂದಲೇ ನೋಡಿದ್ದೇನೆ. ಅವರ ಕ್ರಾಂತಿಕಾರಿ ನಡೆ ಅಂದಿನ ಹಳ್ಳಿಗಳಲ್ಲಿ ಸಂಚಲನ ಮೂಡಿಸಿತ್ತು. ಹರಿಜನ, ಗಿರಿಜನ ಕೇರಿ, ಕೊಳಚೆ ಪ್ರದೇಶ, ಪಟ್ಟಣ, ಹಳ್ಳಿಗಳ ಬೇಧವಿಲ್ಲದೆ ಎಲ್ಲಕಡೆಗೂ ಮಹಾಂತ ಜೋಳಿಗೆಯೊಂದಿಗೆ ಸಂಚರಿಸಿ,ಜನರಲ್ಲಿವ್ಯಸನಗಳಬಗ್ಗೆ ಅರಿವು ಮೂಡಿಸುತ್ತಿದ್ದರು ಎಂದು ಅವರು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ಇಲಾಖೆ ಉಪನಿರ್ದೇಶಕ ಎಸ್.ಎಸ್. ಕೆಳದಿಮಠ ಅವರು ಮಾತನಾಡಿ, ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ದುಶ್ಚಟಗಳಿಗೆ ಒಳಗಾಗಿದ್ದಾರೆ ಎಂಬ ಆರೋಪಗಳಿವೆ. ಆದ್ದರಿಂದ ಇಡೀ ಶೈಕ್ಷಣಿಕ ವಲಯವನ್ನು ವ್ಯಸನಮುಕ್ತಗೊಳಿಸಿ, ಶುದ್ಧಿಕರಿಸುವ ಅಗತ್ಯವಿದೆ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಶಿಕ್ಷಕರಿಗೆ, ಮಕ್ಕಳಿಗೆ ಅರಿವು ಮೂಡಿಸುವ, ಜಾಗೃತಿ ಹೆಚ್ಚಿಸುವ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಡಿಮ್ಹಾನ್ಸ್‌ಸಂಸ್ಥೆಯಟೆಲಿಮಾನಸ್ ವಿಭಾಗದಸಹಾಯಕಪ್ರಾಧ್ಯಾಪಕ, ಮನೋವೈದ್ಯ ಡಾ. ಸುಧೀಂದ್ರ ಹುದ್ದಾರ ಅವರು ಮಾನಸಿಕ ಆರೋಗ್ಯಮತ್ತುವ್ಯಸನಮುಕ್ತತೆಯ ಉಪಾಯಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಸಾನಿಧ್ಯವಹಿಸಿದ್ದ ಮನಗುಂಡಿಗುರುಮಹಾಮನೆಯ ಬಸವಾನಂದ ಸ್ವಾಮಿಗಳು ಮಾತನಾಡಿ, ಪ್ರತಿಯೊಬ್ಬರು ತಮ್ಮ ಶಕ್ತಿಯನ್ನು ಉಪಯೋಗಿಸದಿದ್ದರೆ ಅದು ಖಾಯಿಲೆ ಆಗಿ ಪರಿವರ್ತನೆ ಆಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಅನೇಕ ಸಾಧಕರನ್ನು ನೋಡಿದಾಗ ಸಕ್ಕರೆ, ಹೃದಯ ರೋಗ, ಕ್ಯಾನ್ಸರ್ ದಂತ ರೋಗಗಳನ್ನು ಕಾಣುತ್ತಿದ್ದೇವೆ. ಉತ್ತಮ ಆಹಾರ ಪದ್ಧತಿ, ಉತ್ತಮ ಹವ್ಯಾಸಗಳು ಇದಕ್ಕೆ ಪರಿಹಾರ ಎಂದು ಅವರು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಶುಭಾ ಪಿ., ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಶಶಿ ಪಾಟೀಲ ವೇದಿಕೆಯಲ್ಲಿದ್ದರು.

# ಹುಬ್ಬಳ್ಳಿಯಲ್ಲಿ ಮತ್ತೆ ಘರ್ಜಿಸಿದ ಪೊಲೀಸ್ ಗನ್ದರೋಡೆಕೋರನ ಕಾಲಿಗೆ ಗುಂಡು-ಬಂಧನ

**ಹುಬ್ಬಳ್ಳಿ :** ಅಪರಾಧ ಕೃತ್ಯಗಳು ಎಗ್ಗಿಲ್ಲದೇ ನಡೆ-ಯುತ್ತಿದ್ದ ಹುಬ್ಬಳ್ಳಿ-ಧಾರವಡ ಮಹಾನಗರದಲ್ಲೀಗ ಪೊಲೀಸ್ ಇಲಾಖೆ ಅದನ್ನು ಮಟ್ಟಹಾಕಲು ಮೈಕೊಡವಿ ನಿಂತಂತಿದೆ.

ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಮುಂದಾಗಿದ್ದ ಕುಖ್ಯಾತ ದರೋಡೆ ಕೋರನೋರ್ವನ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಆತನನ್ನು ಬಂಧಿಸಿದ ಘಟನೆ ನಗರದಲ್ಲಿ ನಡೆದಿದೆ.

ಉಪನಗರ ಠಾಣೆ ವ್ಯಾಪ್ತಿಯಲ್ಲಿ ಕೆಲ ದಿನಗಳ ಹಿಂದೆ ಚೈನು, ಉಂಗುರ, ಫೋನ್, ಹಣವನ್ನು ದರೋಡೆ ಮಾಡಿದ ಪ್ರಕರಣ ನಡೆದಿತ್ತು.

ಈ ಪ್ರಕರಣವನ್ನು ಗಂಭಿರವಾಗಿ ಪರಿಗಣಿಸಿದ ಉಪನಗರ ಠಾಣೆಯ ಪೊಲೀಸರು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ತನಿಖೆ ನಡೆಸಿ ಅರುಣ್ ಎಂಬಾತನನ್ನು ಬಂಧಿಸಿದ್ದರು.



ಪ್ರಕರಣದಲ್ಲಿ ಮತ್ತೆ ಕೆಲವರು ಭಾಗಿಯಾಗಿರುವ ಮಾಹಿತಿಯನ್ನು ನೀಡಿದ ಆತ ಎಂ.ಟಿ.ಎಸ್. ಕಾಲನಿಗೆ ಕರೆದೊಯ್ದನೆನ್ನಲಾಗಿದೆ.

ಈ ವೇಳೆ ಪೊಲೀಸರ ಗಮನವನ್ನು ಬೇರೆಡೆ ಸೆಳೆದು, ಅವರ ಮೇಲೆ ಹಲ್ಲೆ ನಡೆಸಿದ ಆರೋಪಿ ಪರಾರಿಯಾಗಲು ಮುಂದಾದನೆನ್ನಲಾಗಿದೆ.

ಈ ಸಂದರ್ಭದಲ್ಲಿ ಇನ್ಸ್ಪೆಕ್ಟರ್ ಎಂ.ಎಸ್. ಹೂಗಾರ ಅವರು ಆರೋಪಿಯ ಕಾಲಿಗೆ ಗುಂಡು ಹಾರಿಸಿ ವಶಕ್ಕೆ ತೆಗೆದುಕೊಂಡಿದ್ದಾರೆ. ಸದ್ಯ ಆರೋಪಿಯನ್ನು ನಗರದ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದ್ದು ಪ್ರಕರಣದ ಹೆಚ್ಚಿನ ಮಾಹಿತಿ ಸಂಗ್ರಹಣೆ ನಡೆದಿದೆ.

ಕೆಲದಿನಗಳ ಹಿಂದಷ್ಟೇ ನಗರದ ಕೇಶ್ವಾಪೂರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಾರಿಯಾಗಲು ಯತ್ನಿಸಿದ ಆರೋಪಿಯೋರ್ವನ ಕಾಲಿಗೆ ಪೊಲೀಸರು ಗುಂಡು ಹೊಡೆದು ಬಂದಿಸಿದ್ದರು.

ಅವಳಿ ನಗರದ ನೂತನ ಪೊಲೀಸ್ ಆಯುಕ್ತರಾಗಿ ಎನ್. ಶಶಿಕುಮಾರ್ ಅಧಿಕಾರ ವಹಿಸಿಕೊಂಡ ನಂತರ ಅಪರಾಧ ಕೃತ್ಯಗಳ ತಡೆಗೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುತ್ತಿರುವುದು ನಾಗರಿಕರಲ್ಲಿ ಕೊಂಚ ನಿರಾಳತೆ ಮೂಡಿಸಿದೆ.

# ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

## ಪೋಕ್ಸೋ ಪ್ರಕರಣಗಳಲ್ಲಿ ನಿಯಂತ್ರಣ ಕ್ರಮಗಳ ಅಗತ್ಯವಿದೆ: ಡಿಸಿ ನಲಿನ್ ಅತುಲ್

**ಕೊಪ್ಪಳ :** ಜಿಲ್ಲೆಯಲ್ಲಿ ದಾಖಲಾಗುವ ಪೋಕ್ಸೋ ಪ್ರಕರಣಗಳಲ್ಲಿ ಬಾಲ್ಯವಿವಾಹ ಪ್ರಕರಣಗಳೂ ಇದ್ದು, ಘಟನಾ ನಂತರ ಪೋಕ್ಸೋ ಪ್ರಕರಣ ದಾಖಲಿಸುವುದರೊಂದಿಗೆ ಪೋಕ್ಸೋ ಪ್ರಕರಣಗಳು ನಡೆಯದಂತೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.



ಇತ್ತೀಚಿಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಗಳ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೋಕ್ಸೋ ಪ್ರಕರಣಗಳಲ್ಲಿ ಕೇವಲ ಅಪ್ರಾಪ್ತೆಯ ಮೇಲಿನ ಲೈಂಗಿಕ ದೌರ್ಜನ್ಯ ಮಾತ್ರವಲ್ಲ, ಬಾಲ್ಯವಿವಾಹದ ಪ್ರಕರಣಗಳಲ್ಲಿಯೂ ಪೋಕ್ಸೋ ಪ್ರಕರಣ ದಾಖಲಿಸಬಹುದು. ಆದ್ದರಿಂದ ಶಾಲಾ ಮಕ್ಕಳಿಗೆ ಬಾಲ್ಯವಿವಾಹ, ಅದರಿಂದಾಗುವ ದುಷ್ಪರಿಣಾಮಗಳು ಹಾಗೂ ಅದ-ರಿಂದ ಆಗುವ ಸಾಮಾಜಿಕ, ಕೌಟುಂಬಿಕ ಮತ್ತು ಆರೋಗ್ಯದ ಪರಿಣಾಮಗಳ ಬಗ್ಗೆ ಪ್ರತಿ ಶಾಲೆಯಲ್ಲಿಯೂ ಮಕ್ಕಳಿಗೆ ಅರಿವು ಮೂಡಿಸಬೇಕು. ಗ್ರಾಮಗಳಲ್ಲಿ ನಡೆಯುವ ಮಕ್ಕಳ ಗ್ರಾಮಸಭೆ, ವಿವಿಧ ಕಾರ್ಯಕ್ರಮಗಳಲ್ಲಿ ಮಕ್ಕಳು ಹಾಗೂ ಪೋಷಕರನ್ನು ಕೇಂದ್ರೀಕರಿಸಿ ಅವರಿಗೆ ಬಾಲ್ಯವಿವಾಹ, ಅಪ್ರಾಪ್ತ ವಯಸ್ಸಿನ ಗರ್ಭಧಾರಣೆಯ ತೊಡಕುಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಬೇಕು. ಪ್ರೌಢಶಾಲೆಗಳಲ್ಲಿ ಈ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅವಶ್ಯಕತೆ ಇದ್ದು, ಪೋ-ಕ್ಸೋ ಪ್ರಕರಣಗಳನ್ನು ನಿಯಂತ್ರಿಸಲು ಅಗತ್ಯವಿರುವ ತರಬೇತಿ, ಜಾಗೃತಿ ಕಾರ್ಯಕ್ರಮಗಳ ಮೂಲಕ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಬಾಲ್ಯವಿವಾಹದ ಕುರಿತು ನಿಗಾ ವಹಿಸಲು ಜಿಲ್ಲೆಯ ಪ್ರತಿ ಶಾಲೆಯಲ್ಲಿಯೂ ಯಾವುದೇ ವಿದ್ಯಾರ್ಥಿ ಸಸತವಾಗಿ 7 ದಿನಗಳ ಕಾಲ ಶಾಲೆಗೆ ಗೈರಾದರೆ ಆ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರು ಮಕ್ಕಳ ಕಲ್ಯಾಣ ಸಮಿತಿ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮಾಹಿತಿ ನೀಡಬೇಕು. ಇದರಿಂದಕೇವಲಬಾಲ್ಯವಿವಾಹಮಾತ್ರವಲ್ಲ ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳನ್ನು ರಕ್ಷಿಸಬಹುದು. ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿಗೆ ಬರುವ ಯಾವುದೇ ಕರೆಯನ್ನು ಗಂಭೀರವಾಗಿ ಪರಿಗಣಿಸಿ, ಪರಿಶೀಲಿಸಬೇಕು. ಬಾಲಗರ್ಭಿಣಿಯರ ಬಗ್ಗೆ ಮಾಹಿತಿ ದೊರೆತ ವೈದ್ಯರು, ಆಸ್ಪತ್ರೆ, ಆಶಾ ಯಾರೇ ಆದರೂ ಕೂಡಲೇ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಿ, ಪ್ರಕರಣ ದಾಖಲಿಸಬೇಕು ಎಂದು ಅವರು ಹೇಳಿದರು.

ಕೌಟುಂಬಿಕ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತೆಯರ ಆಪ್ತ ಸಮಾಲೋಚನೆ, ದೌರ್ಜನ್ಯದ ವಿಧ, ಕೈಗೊಂಡ ಕ್ರಮಗಳ ಬಗ್ಗೆ ಮುಂದಿನ ಸಭೆಯಲ್ಲಿ ಪ್ರತ್ಯೇಕ ಮಾಹಿತಿ ದಾಖಲಿಸಬೇಕು.ದೈಹಿಕಹಲ್ಲೆಪ್ರಕರಣಗಳಲ್ಲಿ ವೈದ್ಯಕೀಯ ವರದಿ ಆಧಾರದಲ್ಲಿ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಬೇಕು. ರಾಜೀ ಪಂಚಾಯತಿಗಿಂತ ಸಂತ್ರಸ್ಥೆಗೆ ಅಗತ್ಯ ವೈದ್ಯಕೀಯ, ಕಾನೂನು ನೆರವು, ಆಪ್ತ ಸಮಾಲೋಚನೆ ನೀಡುವುದು ಮುಖ್ಯ. ಈ ಬಗ್ಗೆ ಸಂಬಂಧಿಸಿದ ಇಲಾಖಾ ಅಧಿಕಾರಿ, ಸಿಬ್ಬಂದಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಿಳಿಸಿದರು.

ಶಾಲಾ ಪೂರ್ವ ಶಿಕ್ಷಣವನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಅಂಗನವಾಡಿಗೆ ಬರುವ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿ. ಪೋಷಕರ ಸಭೆಗಳಲ್ಲಿ ಮಕ್ಕಳ ಅಭಿವೃದ್ಧಿ ಬಗ್ಗೆ, ಕಲಿಕಾ ಮಟ್ಟ, ಮಕ್ಕಳ ಆಸಕ್ತಿಗಳ ಬಗ್ಗೆ ಮಾಹಿತಿ ನೀಡಿ. ಮಕ್ಕಳಿಗೆ ಒತ್ತಡ ಎನಿಸದಂತೆ ಆಟದೊಂದಿಗೆ ಪಾಠ ಎಂಬುದನ್ನರಿತು, ಮಕ್ಕಳನ್ನು ತಯಾರುಗ-ೊಳಿಸಿ. ಶಿಥಿಲವಾದ, ಅನೈರ್ಮಲ್ಯದಿಂದ ಕೂಡಿದ ಕಟ್ಟಡಗಳಲ್ಲಿ ಅಂಗನವಾಡಿಗಳನ್ನು ನಡೆಸಬೇಡಿ.ಪ್ರಸ್ತುತಡೆಂಗ್ಯೂಜ್ವರಮಕ್ಕಳನ್ನು ಹೆಚ್ಚು ಬಾಧಿಸುತ್ತಿದ್ದು, ಅಂಗನವಾಡಿ ಸುತ್ತಲಿನ ಪ್ರದೇಶ ಹಾಗೂ ಅಂಗನವಾಡಿ ಒಳಾಂಗಣವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ. ಡೆಂಗ್ಯೂ ಲಕ್ಷಣ ಕಂಡುಬಂದ ಮಗುವನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯುವಂತೆ ಪೋಷಕರಿಗೆ ಅರಿವು ಮೂಡಿಸಿ ಎಂದು ಅವರು ಹೇಳಿದರು.

ಕೋಟ್ಪಾ ಕಾಯ್ದೆ ಹಾಗೂ ಮಕ್ಕಳ ರಕ್ಷಣಾ ನೀತಿ, ಮಕ್ಕಳ ನ್ಯಾಯ ಕಾಯ್ದೆ ಅನ್ವಯ ಶಾಲೆಯ ಸುತ್ತಲಿನ 100 ಮೀಟ-ರ್ ಅಂತರದಲ್ಲಿ ಯಾವುದೇ ತಂಬಾಕು ಉತ್ಪನ್ನಗಳ ಮಾರಾಟ ಮಾಡುವಂತಿಲ್ಲ. ಅಪ್ರಾಪ್ತರಿಗೆ ತಂಬಾಕು ಉತ್ಪನ್ನ ಮಾರಾಟ ಮಾಡುವಂತಿಲ್ಲ. ಈ ಬಗ್ಗೆ ಜಿಲ್ಲೆಯ ಎಲ್ಲ ಸರ್ಕಾರಿ, ಖಾಸಗಿ ಶಾಲೆಗಳು ಖುದ್ದು ಕ್ರಮ ಕೈಗೊಂಡು ಪರಿಶೀಲಿಸಬೇಕು. ಶಾಲೆಗಳಲ್ಲಿ ಮಾತ್ರವಲ್ಲದೆ ಶಾಲಾ ಹೊರಾಂಗಣ ಆವರಣದಲ್ಲಿಯೂ ಸಿಸಿ ಕ್ಯಾಮೆರಾ ಅಳವಡಿಸಬೇಕು. ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಿಗೆ ಜಾಗೃತಿ ಮೂಡಿಸಬೇಕು. ಆರೋಗ್ಯಕರ ಹವ್ಯಾಸಗಳನ್ನು ರೂಢಿಸಿಕೊಳ್ಳಲು ಶಿಕ್ಷಕರು ಸಹಕರಿಸಬೇಕು. ಈ ಬಗ್ಗೆ ಶಿಕ್ಷಣ ಇಲಾಖೆ ಕಡ್ಡಾಯ ನಿರ್ದೇಶನ ನೀಡಬೇಕು ಎಂದು ಅವರು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಲಕಾರಿ ರಾಮಪ್ಪ ಒಡೆಯರ್ ಅವರು ಮಾತನಾಡಿ, ಇತ್ತೀಚೆಗೆಜಿಲ್ಲೆಯಕೆಲವುಅಂಗನವಾಡಿಗಳಿಗೆ ದಿಢೀರ್ ಭೇಟಿ ನೀಡಲಾಗಿತ್ತು. ಆ ಸಂದರ್ಭ ಕೆಲವು ಅಂಗನವಾಡಿಗಳಲ್ಲಿ ಮಕ್ಕಳ ಹಾಜರಾತಿಯನ್ನು ಸರಿಯಾಗಿ ನಿರ್ವಹಿಸದಿರುವುದು ಕಂಡುಬಂದಿತು. ಆದ್ದರಿಂದ ಎಲ್ಲ ತಾಲ್ಲೂಕು ಮಟ್ಟದ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ನಿಯಮಿತವಾಗಿ ನಿಮ್ಮ ವ್ಯಾಪ್ತಿಯ ಅಂಗನವಾಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಮಕ್ಕಳಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಮಾತನಾಡಿ, 2024-25ನೇ ಸಾಲಿನಲ್ಲಿ ಪ್ರಾರಂಭಿಕ 103 ಪೋಕ್ಸೋ ಪ್ರಕರಣಗಳು ಸೇರಿದಂತೆ ಮೊದಲನೇ ತ್ರೈಮಾಸಿಕದಲ್ಲಿ 17 ಪ್ರಕರಣಗಳು ದಾಖಲಾಗಿದೆ. ಅವುಗಳಲ್ಲಿ 20 ಪ್ರಕರಣಗಳು ಖುಲಾಸೆಯಾಗಿದ್ದು, 2 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. 98 ಪ್ರಕರಣಗಳು ವಿವಿಧ ಹಂತಗಳಲ್ಲಿ ಬಾಕಿ ಇವೆ. 2024-25 ನೇ ಮೊದಲನೇ ತ್ರೈಮಾಸಿಕದಲ್ಲಿ ಕೊಪ್ಪಳ ತಾಲ್ಲೂಕಿನಲ್ಲಿ 21, ಗಂಗಾವತಿಯಲ್ಲಿ 5, ಕನಕಗಿರಿಯಲ್ಲಿ 07, ಕುಷ್ಟಗಿ ತಾಲ್ಲೂಕಿನಲ್ಲಿ 15, ಯಲಬುರ್ಗಾ ತಾಲ್ಲೂಕಿನಲ್ಲಿ 8, ತಡೆಯಾಜ್ಞೆ ಮೂಲಕ 02 ಹಾಗೂ ಬೇರೆ ಜಿಲ್ಲೆಯ ಪ್ರಕರಣಗಳಲ್ಲಿ 02 ಸೇರಿದಂತೆ ಒಟ್ಟು 60 ಮಕ್ಕಳನ್ನು ಬಾಲ್ಯವಿವಾಹದಿಂದ ರಕ್ಷಿಸಲಾಗಿದೆ. ಕುಷ್ಟಗಿಯ ಹನುಮಸಾಗರದ 01 ಪ್ರಕರಣದಲ್ಲಿ ದೂರು ದಾಖಲಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿಶೇಷ ಪಾಲನಾ ಯೋಜನೆ, ಪ್ರಾಯೋಜಕತ್ವ ಯೋಜನೆ, ಮುಖ್ಯಮಂತ್ರಿ ಬಾಲಸೇವಾ ಯೋಜನೆ, ಉಪಕಾರ ಯೋಜನೆ, ದತ್ತು ಕಾರ್ಯಕ್ರಮ, ಮಿಷನ್ ವಾತ್ಸಲ್ಯ, ಮಿಷನ್ ಶಕ್ತಿ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಪ್ರಗತಿ ಪರಿಶೀಲನೆ ನಡೆಸಲಾಯಿತು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ರತ್ನಂ ಪಾಂಡೆಯ, ಹೆಚ್ಚುವರಿ ಎಸ್‌ಪಿ ಹೇಮಂತ್‌ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧ ಇಲಾಖೆಯ ನಿರೂಪಣಾಧಿಕಾರಿ ಗಂಗಪ್ಪ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ನಿಲೋಫರ್ ರಾಂಪುರಿ, ಯುನಿಸೆಫ್‌ನ ಹರೀಶ್ ಜೋಗಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದಅಧಿಕಾರಿಗಳು,ಜಿಲ್ಲಾಮಕ್ಕಳಕಲ್ಯಾಣ ಸಮಿತಿಯ ಸದಸ್ಯರು, ಸಿಡಿಪಿಒಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಅರ್ಜಿ ಆಹ್ವಾನ

**ಕೊಪ್ಪಳ :** ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ರೈತರಿಗೆ ವಿತರಿಸುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಗೆ ಸಾಮಾನ್ಯ ವರ್ಗ ಘಟಕದಡಿ ವೈಯಕ್ತಿಕ ಫಲಾನುಭವಿಗೆ 1 ಮತ್ತು ಸಂಘ ಸಂಸ್ಥೆಗಳಿಗೆ 1 ಒಟ್ಟು 2 ಕಂಬೈನ್ಡ್ ಹಾರ್ವೆಸ್ಟರ್ ಹಬ್ ಕ್ರಿಯಾ ಯೋಜನೆ ಅನುಮೋದನೆಗೊಂಡಿರುತ್ತದೆ.

ಈ ಹಬ್‌ನಲ್ಲಿ ಕಡ್ಡಾಯವಾಗಿ ಕಂಬೈನ್ಡ್ ಹಾರ್ವೆಸ್ಟರ್ ಮತ್ತು ಟ್ರ್ಯಾಕ್ಟರ್ ಆಪರೇಟೆಡ್ ಬೇಲರ್ಸ್ ಇರತಕ್ಕದ್ದು. ಯೋಜನೆಯಡಿ ಸಾಮಾನ್ಯ ವರ್ಗ ಘಟಕದಡಿ ವೈಯಕ್ತಿಕ ಫಲಾನುಭವಿಗೆ ಗರಿಷ್ಠ 40 ಲಕ್ಷ (ಶೇ.50 ಸಹಾಯಧನ) ಮತ್ತು ಸಂಘ ಸಂಸ್ಥೆಗಳಿಗೆ ಗರಿಷ್ಠ 50 ಲಕ್ಷ (ಶೇ.70 ಸಹಾಯಧನ )ಇರುತ್ತದೆ. ಆದ ಕಾರಣ ಆಸಕ್ತ ರೈತರು/ಸಂಘ ಸಂಸ್ಥೆಗಳು/ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ)/ ಕೃಷಿ ಯಂತ್ರೋಪಕರಣಗಳ ಬ್ಯಾಂಕ್ (ಎಫ್‌ಎಂಬಿ) / ಕೃಷಿ ಯಂತ್ರಧಾರೆ ಕೇಂದ್ರಗಳು (ಸಿಎಚ್‌ಎಸ್‌ಸಿ) ಗಳು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಆಗಸ್ಟ್ 17 ರೊಳಗೆ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸಬೇಕು.

ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಉಪಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಲಾಗುವುದು.. ನಂತರ ಈ ಕಛೇರಿಯಲ್ಲಿ ಉಪಕೃಷಿ ನಿರ್ದೇಶಕರ ಕಛೇರಿಯಿಂದ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾ ಮಟ್ಟದ ಉಪಕರಣ ಸಮಿತಿಯಲ್ಲಿ ಮಂಡಿಸಲಾಗುವುದು. ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಒಂದೇ ಹಬ್‌ಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿ ಅರ್ಹಗೊಂಡಲ್ಲಿ, ಲಾಟರಿ ಮುಖಾಂತರ ಫಲಾನುಭವಿಯನ್ನು ಆಯ್ಕೆ ಮಾಡುವುದು. ಈ ಕಛೇರಿಯಿಂದ ಆಯ್ಕೆಯಾದ ಫಲಾನುಭವಿಗೆ ಕೃಷಿ ಯಂತ್ರೋಪಕರಣಗಳನ್ನು ದಾಸ್ತಾನಿಕರಿಸಲು ಕಾರ್ಯಾದೇಶ ನೀಡಲಾಗುವುದು. ಹಬ್‌ವಾರು ಸ್ವೀಕೃತವಾದ ಯಂತ್ರೋಪಕರಣಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ, ಸಹಾಯಧನವನ್ನು ನಿಯಾಮನುಸಾರ ಸಂಬಂಧಿಸಿದವರ ಸಾಲದ ಬ್ಯಾಂಕ್ ಖಾತೆಗೆ ಕ್ರೆಡಿಟ್ ಲಿಂಕ್ಡ್ ಬ್ಯಾಕ್ ಎಂಡೆಡ್ ಸಬ್ಸಿಡಿ ಮೂಲಕ ಜಮಾ ಮಾಡಲಾಗುವುದು.

ಫಲಾನುಭವಿ/ಸಂಘ ಸಂಸ್ಥೆಗಳು ಅರ್ಜಿಯೊಂದಿಗೆ ಸಂಸ್ಥೆಯಾದಲ್ಲಿ ಸಹಕಾರ ಸಂಘಗಳ ನಿಬಂಧನೆಯಂತೆ ಸಂಸ್ಥೆ ನೋಂದಾಯಿಸಿರುವ ಬಗ್ಗೆ ಪ್ರಮಾಣ ಪತ್ರ, ಪಹಣಿ ಪ್ರತಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ ಮತ್ತು ಎಫ್‌ಐಡಿ ಸಂಖ್ಯೆ, ರೂ.100 ಚಾಪಾ ಕಾಗದದ ಮೇಲೆ ಹಬ್ ಅನ್ನು ಪರಭಾರೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ (ನೋಟರಿಯೊಂದಿಗೆ), ಇತ್ತೀಚಿನ 3 ವರ್ಷಗಳ (2021-22, 2022-23 & 2023-24 ) ಲೆಕ್ಕ ಪರಿಶೋಧನಾ ಪತ್ರ, ಸಹಾಯ ಧನವು ಕ್ರೆಡಿಟ್ ಲಿಂಕ್ಡ್ ಬ್ಯಾಕ್ ಎಂಡೆಡ್ ಸಬ್ಸಿಡಿ ಆಗಿರುವುದರಿಂದ ಸಂಬಂಧಿಸಿರುವ ಬ್ಯಾಂಕ್‌ನಿಂದ ತಾತ್ವಿಕ ಸಾಲ ಮಂಜೂರಾತಿ ಪತ್ರವನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್/ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಪಡೆದು ಸಲ್ಲಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್.ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಕೊಪ್ಪಳ :** ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ 2023-24ನೇ ಸಾಲಿನಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರ ಮಟ್ಟದಲ್ಲಿ ವಿಶೇಷ ಸಾಧನೆಗೈದ 18 ವರ್ಷದ ಒಳಗಿನ ಮಕ್ಕಳಿಂದ ಬಾಲಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಈ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಮಕ್ಕಳು ಕ್ರೀಡೆ, ಸಂಗೀತ, ನೃತ್ಯ, ಬಹುಮುಖ ಪ್ರತಿಭೆ, ನಟನೆ, ಚಿತ್ರಕಲೆ, ಹಾಗೂ ವಿಜ್ಞಾನ ಮತ್ತು ಸಂಶೋಧನೆಯಲ್ಲಿ ಹೀಗೆ 07 ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿ ಪ್ರಶಸ್ತಿ ಪಡೆದ ಪುರಸ್ಕೃತ ಮಗುವಾಗಿರಬೇಕು.

ಇಂತಹ ಮಕ್ಕಳು ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ತಮ್ಮ ಸ್ವಯಂ ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವ-ವಿವರಗಳನ್ನೊಳಗೊಂಡ ಮನವಿಯೊಂದಿಗೆ ಅರ್ಜಿಯನ್ನು ಆಗಸ್ಟ್ 26ರೊಳಗಾಗಿ ಅಕಾಡೆಮಿಯ ಕೇಂದ್ರ ಕಚೇರಿ ವಿಳಾಸ: ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಕೇಂದ್ರ ಕಚೇರಿ ವಿಳಾಸ: ಯೋಜನಾಧಿಕಾರಿಗಳು, ಚಂದ್ರಿಕಾ ಲೇ ಔಟ್ ಹಿಂಭಾಗ, ಕೆ.ಹೆಚ್.ಬಿ ಕಾಲೋನಿ, ಲಕಮನಹಳ್ಳಿ ಧಾರವಾಡ-580004, ದೂರವಾಣಿ ಸಂಖ್ಯೆ: 0836-2465490, ಇಲ್ಲಿಗೆ ಪೋಸ್ಟ್ ಮುಖಾಂತರ ತಲುಪುವಂತೆ ಕಳುಹಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಹಾಗೆಯೇ ಈಗಾಗಲೇ "ಬಾಲಗೌರವ ಪ್ರಶಸ್ತಿ" ಪಡೆದವರ ಅರ್ಜಿಗಳನ್ನು ಸಹ ಈ ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಈ ಪ್ರಶಸ್ತಿಯ ಅರ್ಜಿ ನಮೂನೆ/ ಮಾನದಂಡಗಳನ್ನು ಕಚೇ-ರಿಯ ವೆಬ್‌ಸೈಟ್ ಲಿಂಕ್ https://balavikasacademy.karnataka.gov.in/ ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಕೊಪ್ಪಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

